ಕನ್ನಡ ಶಾಲಾಪತ್ರಿಕೆ

CANARESE SCHOOL PAPER.

ಪುಸ್ತಕ ೧೨] [ಸಂಚಿಕೆ ೧೦

ತಾರೀಖು ೨೫ ಮಾಹೆ ಜಾನೇವಾರಿ ೧೮೭೭.

ಅನುಕ್ರಮಣಿಕೆಯು.

ವಿಷಯಗಳು..... ಪುಟ.

ವಿದ್ಯಾ ಸುಧಾರಣಾ ಸಂಬಂಧದ ದೃಷ್ಟಾಂತಗಳು.....೫೦೫

ಪರಭಾಷೆಗಳನ್ನು ಕಲಿಯುವಪದ್ಧತಿಯು.....೫೧೯

ಭಾಷಾದರ್ಪಣ.....೫೨೩

ಪದಾರ್ಥವಿಜ್ಞಾನ ಸಂಬಂಧದ ಪ್ರಶ್ನೋತ್ತರಗಳು.....೫೨೭

ಬಾದಾವಿ.....೫೨೮

ಪತ್ರವ್ಯವಹಾರವು.....೫೨೬

CONTENTS.....Page

Educational Intelligence.....505

Correspondence.....526



BELGAUM.

Printed at the "Belgaum Samachar" Press.

ಶಾಲಾಪತ್ರಿಕೆ.

ಪುಸ್ತಕ ೩೨] [ಸಂಚಿಕೆ ೩೦

ತಾರೀಖು, ೨೫ನೇ ಮಾಹೆ ಜಾನೇವಾರಿ, ೧೮೬೨.

EDUCATIONAL INTELLIGENCE.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು.

ಪುಣೆಯಲ್ಲಿರುವ "ಡೆಕ್ಕನ್ ಕಾಲೇಜ ಕ್ಲಬ" ಯೆಂಬ ಸಭೆಯವರು ಕಳಿದ ೧೮ ವರ್ಷಗಳಲ್ಲಿ ಪ್ರಸಿದ್ಧಿಸಲ್ಪಟ್ಟಂಥ ಯಾವತ್ತು ಕವಿತಾ ಗ್ರಂಥಗಳಲ್ಲಿಯೂ ನಾವೆಲ್ಸೆಂಬ ಕಾದಂಬರಿಗಳಲ್ಲಿಯೂ ಕಂಡು ಬರುವಂಥ ಗುಣದೋಷಗಳನ್ನು ಯಥಾರ್ಥವಾಗಿ ವಿಂಗಡಿಸುವಂಥ ಮೇಲಾದ ನಿಬಂಧ ಬರೆದವರಿಗೆ ೫೦ ರೂಪಾಯಿ ಇನಾಮು ಕೊಡುವೆವೆಂದು ಜಾಹೀರ ನಾಮೆಯನ್ನು ಪ್ರಕಟಿಸಿದ್ದಾರೆ. ಈ ನಿಬಂಧ ಕರ್ತರು ಮಾರ್ಚ ತಿಂಗಳಿನ ೩೧ನೇ ತಾರೀಖಿನ ವರೆಗೆ ತಮ್ಮ ತಮ್ಮ ನಿಬಂಧಗಳನ್ನು ಕಮಿಟಿಯ ಬಳಿಗೆ ಕಳುಹ ಬೇಕಾಗಿದೆ. ಇದಾ ಇಷ್ಟಾದ ನಿಬಂಧಕ್ಕೆ ಕೊಡ ಮಾತಿದ ಪುಸ್ತಾಗೊತ್ತು ಮಾಡಿದ ಅವಧಿಯೂ ಬಹ್ವ ಸ್ವಲ್ಪೆಂದು ಎಜೂಕೇಶನಲ್ ರಿಕಾರ್ಡ ಕರ್ತರ ಅಭಿಪ್ರಾಯ ವಿದ್ದಂತೆ ನಮ್ಮದಾದರೂ ಅಭಿಪ್ರಾಯವದೆ.

ಈ ವರ್ಷ ಬಿ. ಏ. ಪದವಿಯ ಪರೀಕ್ಷೆಯಲ್ಲಿ ಎಲ್ಲಿ ನವರ ಕಾಲೇಜಿನ ವಿದ್ಯಾರ್ಥಿಗಳು ೨೭ ಜನರು ಡೆಕ್ಕ (ಪೂರ್ವ) ಕಾಲೇಜಿನವರು ೬ ಜನರು ಪಾಸಾದರು.

ಲಂಡನ್ ಪಟ್ಟಣದಲ್ಲಿ "ಸ್ಕೂಲ್ ಬೋರ್ಡ್" ಎಂ ಮೊಂದು ಸಭೆಯುಂಟು ಅವರಲ್ಲಿ ಕೆಲವರು ಪ್ರೌಢ ಸಭಾಸ ದ ಕಳಿದ ತಿಂಗಳಲ್ಲಿ ನೇಮಿಸಲ್ಪಟ್ಟರು. ಅವರೊಳಗೆ ವಿ ಪೀಲನಾ ಪೀಲರ್ ಎಂಬವಳೊಬ್ಬ ಸ್ತ್ರೀಯಳು ಸಭಾಸದ ನಿರುತ್ತಾಳೆ. ಇವಳು ಅಧ್ಯಾಪಕ ನ್ಯಾಯ ಬಸ್ತ್ರಗಳ ಪೆಸರು ಪಡೆದವಳಾದ ಹಾನ್ಸ್ಕೂಪಾಟ್ ವಿಲ್ಲಿಯಂಬ ವಿದ್ವಾ ಸನ ಸೋದರಿ ಸೋದೆಯಮಂತೆ.

ವಿಲಾಯತಿಯಲ್ಲಿ ಮಟ್ರಿಕ್ಯುಲೇಶನ್ ಪಟ್ಟಣದಲ್ಲಿ ಕಳ: ನಿಹಾಯನ ತಿಂಗಳಲ್ಲಿ ನಡೆದ ಕ್ಯಾಲೇಜಿನ ಪರೀಕ್ಷೆ ಯ ಯಿತು. ಆ ಪರೀಕ್ಷೆಗೆ ಹೋದ ೫೫ ಜನ ವಿದ್ಯಾರ್ಥಿಗಳಲ್ಲಿ ೫೫ ಮಂದಿ ಪಂಗಸಿದ್ದರು. ಈ ಸ್ತ್ರಿಯರಲ್ಲಿ ೬ ಮಂದಿ ಗ ಪಾಸಾದರು. ಉಳಿದ ೪೯ ಮಂದಿ ಗಂಡು ವಿದ್ಯಾರ್ಥಿಗಳಲ್ಲಿ ೨ ಜನ ಮಾತ್ರ ಪಾಸಾದರು. ಹಿಕ್ಕ ಈ ೫೫ ಜನರು ಸಿವಿಲ್ ಸರ್ವಿಸಿನ ಪರೀಕ್ಷೆಗೆ ಕೂರ್ತಾರಂತೆ. ಅವರಲ್ಲಿ ೬ ಮಂದಿ ಪಾ ಸಾಗಿ ೩ ಮಂದಿ ಗಂಡಸರೂ ಪಾಸಾದರು.

ಇಂಗ್ಲಿಷ ವಿಶ್ವವಿದ್ಯಾಲಯದಲ್ಲಿ ಕೆಲವು ವರ್ಷಗಳಿಗೆ ಒಂದು ಸಲ ಉಪಾಧ್ಯಾಯರನ್ನು ಕೆಲವು ಉಪಾಧ್ಯಾಯರಿಗಳಿಗೆ ಒದಕ್ಕಿಂತ ಹೆಚ್ಚು ವರ್ಷಗಳಿಗೂ ಇರುತ್ತದೆ. ಇವರಿಂದ ಗಳನ್ನು ಬರೆಯುವವರಲ್ಲಿ ಬಹಳ ಜನರಿದ್ದರೆ ಯುಂಟಾಗು

ಸಬೆಂಬುದು ಪಸಿದ್ಧವಸೆ. ಈ ಕೊಂಪರೆಯನ್ನು ಪರಿಹರಿಸುವ
ನಕ್ಕೋಸ್ಕರ. ಅಂಪರೆ ಎಂಪೆಂಬು ಪೂರ್ಣಕ್ಕೆ ಬಿಂದೊಂದೇ
ಭಾಜಕವಪನ್ನು ಸೊತ್ತು ಪೂರ್ಣವದಕ್ಕೋಸ್ಕರ ವಿಲಂಯಲಿ
ಯಲ್ಲಿ ವಿದ್ಯಾಸಂಬಂಧವಪೆಂದು ಪನಂಜಪಡನಸರು ಬಸಿ
ದ್ದ ಪ್ರಯತ್ನವನ್ನು ಪಟ್ಟಿಸಿದ್ದಾರೆ ಅವರ ಲಂಡನ್ ಪ್ರಸ್ಸ
ಪೊದಲಾದ ಪತ್ರಿಕೆ ಸರ್ಕಾರವಿಕ್ರಕರಾದಿ ಈ ವಿಷಯ
ವನ್ನು ಪರಿಶೀಲಿಸಿದ್ದಾರೆ.

ಕಳೆದ ಸಾಲ್ಕು ವರ್ಷಗಳಲ್ಲಿ ಕೊಲ್ಲಾಪುರ ಬೆಳಗಾವಿ ಧಾ
ರವಾಡ ಈ ಮೂರು ಜಿಲ್ಲೆಗಳ ವಿದ್ಯಾಭ್ಯಾಸಗಳು
ಸ್ಥಿತಿಯನ್ನು ಲೀನಾ ಪರಿಶೀಲಿಸಿದ್ದಲ್ಲಿ ಪಾಸಾದ ವಿವರ :-

	೧೮೭೯	೧೮೮೪	೧೮೮೮	೧೮೮೯
ಕೊಲ್ಲಾಪುರ-	೨೫	೧೨	೨೦	೪
ಬೆಳಗಾವಿ-	೬	೪	೬	೬
ಧಾರವಾಡ-	೨೩	೪	೧೪	೪

ಮಧ್ಯಮ ಪರೀಕ್ಷೆಯು ಸ್ಕಾಲರಷಿಪ್ಪಿಗಿಂತಲೂ ಬಹಳ ಪಡೆಯಲ್ಲಿ
ಸ್ಥಾಪಿಸಲ್ಪಟ್ಟಿದೆ. ಬಹ್ಮಲಜನ ವಿದ್ಯಾಪದ್ಧತಿಯನ್ನು ಕಲಿಸುವ ವಿದ್ಯಾ
ಲಯವಲ್ಲಿ ಪೆಷವತ್ತು ಪರೀಕ್ಷೆಗಳಂಪ ಹೆಸರು ವಿದ್ಯಾಭ್ಯಾಸಗಳ
ಸಂಖ್ಯೆಯು ನಿಂತ ನಿಂತ ಬೆಳವಣಿಗೆಯಿಂದ ಅವರೆಲ್ಲರ ಪನಾಪೇ
ಕ್ಷವಾಗಿರಂತೆ ದೂರದ ಮೇರೆಯ ಫಲಾಗ್ಧವಪನ್ನು ಕಟ್ಟಿಸುವ
ಉದ್ದೇಶವು ಈ ಪರೀಕ್ಷೆಯು ಸರಕಾರವವರಲ್ಲಿ ಇಪೆಪವೆ.

ಹಿಂದುಳಿದ ಸರಕಾರವವರ ವಿದ್ಯಾ ನಾಯರು ೨೬೯೯.
ಈ. ಇ ಸಂ ಆಗಬಂಬರು ೨ ೬೬ -

ಈ ಕರಾವಿನಲ್ಲಿ ಬಹು ಜನರು ಸರಕಾರೀ ನೌಕರರ ವೋಟ್ಸು ಗೂಡಿ ವರಿಷ್ಠಾಧಿಕಾರಿಗಳಿಗೆ ಅರ್ಜಿಗಳನ್ನು ಕಳುಹಲಾಗದೆಂಬಬಗ್ಗೆ ಸದರೀ ಸರಕಾರದವರು ವಿಧಿಸಿದ ನಿಯಮಗಳು ಹ್ಯಾಗಂದರೆ.—

೧ ಸರಕಾರಕ್ಕೆ ಅರ್ಜಿಯನ್ನು ಕಳುಹಲಿಚ್ಛಿಸುವ ಆಫೀಸರರು ತಮ್ಮ ಅರ್ಜಿಗಳನ್ನು ಬೇರೆ ಬೇರೆ ಯಾಗಿ ಕಳುಹತಕ್ಕದ್ದು; ಬಹು ಜನರು ಕೂಡಿ ಒಂದೇ ಅರ್ಜಿಯನ್ನು ಕಳುಹಕೂಡದು.

೨ ಯಾವನೊಬ್ಬ ಆಫೀಸರನು, ತನ್ನ ಆಫೀಸಿನ ಪದವಿಗೆ ಸಂಬಂಧಿಸಿದಾಗ್ಯೂ ಸ್ವತಃ ತನಗೆ ಸಂಬಂಧಿಸದಂಥ ಪ್ರಸಕ್ತಿಯಲ್ಲಿ, ತಮ್ಮ ಕೆಲಸದಲ್ಲಿ ತಾವೇ ಅರ್ಜಿಯನ್ನು ಮಾಡಿಕೊಳ್ಳಲಿಕ್ಕೆ ಅಸಮರ್ಥರಾಗಿದ್ದಂಥ ಬೇರೆ ಜನರ ಪೊಷಿತ್ತಾರನಾಗಿ, ಸರಕಾರಕ್ಕೆ ಅರ್ಜಿಯನ್ನು ಕಳುಹಲಾಗದು.

೩ ಥಾಪಿಸಿದ ಅರ್ಜಿಯನ್ನು ಸರಕಾರೀ ನೌಕರರು ಯಾರೂ ಕಳುಹಲಾಗದು.

೪ ಬಹು ಜನರು ಕೂಡಿ ಬರೆಯತಕ್ಕಂಥ ವಿಳಾಸ ಪದ್ಧತಿಗಳಿಂದ ಅರ್ಜಿಯನ್ನು ಯಾರೂ ಸರಕಾರೀ ನೌಕರರು ಬರೆಯಲಾಗದು. ಅರ್ಜಿದಾರನು ತನ್ನ ಸ್ವಂತ ಶಬ್ದಗಳಿಂದ ಸನ್ಮಾನಪೂರ್ವಕವಾಗಿ ತಕ್ಕ ಮರ್ಯಾದೆಯಿಂದ ಅರ್ಜಿಯನ್ನು ಬರೆಯಬೇಕು.

೫ ಈ ನಿಯಮಗಳಿಗೆ ವಿರುದ್ಧವಾಗಿ ಕಳುಹಲ್ಪಟ್ಟ ಅರ್ಜಿಗಳನ್ನು ವರಿಷ್ಠಾಧಿಕಾರಿಗಳು ಅಂಗೀಕರಿಸಲಿಕ್ಕಿಲ್ಲ; ಮತ್ತು ಅಂಥ ಅರ್ಜಿಗಳನ್ನು ಕಳುಹಿಸುವ ಆಫೀಸರರು ಸರಕಾರದವರ ಸೂರೀ ಎತರಾಜಿಗೆ ಮಾತ್ರ ಗುರಿಯಾಗುವರು.

ಪರ ಭಾಷೆಗಳನ್ನು ಕಲಿಯುವ ಪದ್ಧತಿಯು.

——000——

ಯಾವದೊಂದು ಭಾಷೆಯನ್ನು ಕಲಿಯುವವರಲ್ಲಿ ಅವ
ನ್ನು ಪ್ರಯೋಗಿಸುವದೂ, ಅವನ್ನು ತಿಳಿದುಕೊಳ್ಳುವದೂ
ಇವೆರಡು ಮುಖ್ಯ ವಿಷಯಗಳುಂಟು. ಪ್ರಯೋಗಿಸುವದೆಂದ
ಆ ಭಾಷೆಯಲ್ಲಿ ಮಾತನಾಡುವದೂ ಬರೆಯೂವದೂ; ಅ
ನ್ನು ತಿಳಿದುಕೊಳ್ಳಲಿಕ್ಕೆ ಓದುವದೂ ಕೇಳುವದೂ ಇವೆರ
ಡು ಮಾರ್ಗಗಳುಂಟು.

ಭಾಷೆಗಳನ್ನು ಕಲಿಯಲಿಕ್ಕೆ ಸ್ವಾಭಾವಿಕ ಕ್ರಮವುಳ್ಳ ಸು
ಲಭ ಮಾರ್ಗವೊಂದು ಇರಲಿಕ್ಕೆ ಬೇಕು. ಯಾಕಂದರೆ ಚಿ
ಕ್ಕವರಿದ್ದಾಗ ನಾವೆಲ್ಲರು ನಮ್ಮ ನಮ್ಮ ಜನ್ಮಭಾಷೆಗಳನ್ನು
ಯಾವ ಶ್ರಮವಿಲ್ಲದೆ ಬಹು ಸ್ವಲ್ಪ ಕಾಲದೊಳಗೆ ಕಲಿತೆವು.
ಸತ್ತು, ಹನ್ನೆರಡು ವರ್ಷದ ಹುಡುಗರನ್ನು ಪರ ದೇಶಕ್ಕೆ ಕ
ರೆಕೊಂಡು ಹೋದರೆ ಆ ಹುಡುಗರು ಅಲ್ಲಿಯ ಭಾಷೆಯನ್ನು
ಇದಕ್ಕೂ ಸ್ವಲ್ಪ ಕಾಲದೊಳಗೆ ಕಲಿಯುತ್ತಾರೆ.

ಈ ಪ್ರಸಕ್ತಿಯಲ್ಲಿ ಕೆಲಜನರ ಅಭಿಪ್ರಾಯವೇನಂದರೆ
ದೊಡ್ಡವರಂತೆ ಹುಡುಗರಮನಸ್ಸಿನಲ್ಲಿ ಬಗೆಬಗೆಯ ಭಾವನೆಗಳ
ತುಂಬಿರುವದಿಲ್ಲ; ಅದರಿಂದ ಅವರ ಮನಸ್ಸಿನಲ್ಲಿ ಶಬ್ದಗಳನ್ನು
ಸಂಗಹಿಸುವ ಸಾಮರ್ಥ್ಯವು ದೊಡ್ಡವರಿಗಿಂತ ಹಚ್ಚಿರುವಕಾ
ಣ ಅವರು ಹೊಸ ಭಾಷೆಯನ್ನು ಬೇಗ ಕಲಿಯುವದು ಸ
ಭಾವಿಕವು. ಆದರೆ ಬಾಲಕರ ಜ್ಞಾನೇಂದ್ರಿಯಗಳು ಪಕ್ವವಾಗಿರು
ದಿಲ್ಲ; ತಮ್ಮ ಸುತ್ತು ಮುತ್ತಲಿನ ಪದಾರ್ಥಗಳ ಅನುಭವ
ಅವರಿಗಿರುವದಿಲ್ಲ; ಅದರಿಂದ ಸಾವಿರಾರು ಹೊಸ ಸಂಗತಿಗ

ನ್ನು ಕಲಿತುಕೊಳ್ಳಲಿಕ್ಕೆ ಅವರು ಹೆಣಗಿಸುತ್ತಿರುತ್ತಾರೆ. ಹೀ
ರಲು ಅವರು ಭಾಷೆಯನ್ನಾಗಲಿ ಬೇರೊಂದು ಸಂಗತಿಯನ್ನಾ
ಗಲಿ ವ್ಯಾಯಸ್ಥರಿಗಿಂತ ಹಚ್ಚು ಬೇಗ ಹ್ಯಾಗೆ ಕಲಿಯುವರು
ಆದಾಗ್ಯೂ ಜೆಕ್ಕವರು ಭಾಷೆಗಳನ್ನು ಬೇಗ ಕಲಿಯುವದ
ನಿರ್ವಿವಾದವ್ರ. ಇದರಿಂದ, ಸ್ವಾಭಾವಿಕ ಕ್ರಮವಂನು ಅನುಸ
ರಿಸಲಾಗಿ ಭಾಷೆಗಳಂನು ಬಹ್ರ ಬೇಗ ಕಲಿಯಬಹ್ರದೆಂದು
ನಾವ್ರ ತರ್ಕಿಸುತ್ತೇವೆ. ಸ್ವಲ್ಪ ಹೆಚ್ಚಿಗೆ ಬೆಳೆದ ಹ್ರಡುಗರು
ಪರ ಭಾಷೆಯನ್ನು ತಮ್ಮ ಜನ್ಮ ಭಾಷೆಗಿಂತಲೂ ಹಚ್ಚು ಬೇಗ
ಕಲಿಯುತ್ತಾರೆಂದು ಮೇಲೆ ಹೇಳಿದೆವಷ್ಟೇ; ಇದರಿಂದ ಹ್ರಡು
ಗರು ತಮ್ಮ ಸ್ವಂತ ಪದ್ಧತಿಯಿಂದ ಕಲಿಯುವದರ ಫಲವ್ರ
ವ್ಯಕ್ತ ವಾಗುತ್ತದೆ. ಅದೇ ಪದ್ಧತಿಯನ್ನು ನಾವ್ರ ಅನುಸರಿ
ಸಿದರೆ, ಅವರಿಗಿಂತಲೂ ಹೆಚ್ಚಿನ ಫಲವಂನು ಪಡೆಯುವೆವ್ರ
ಯಾಕಂದರೆ ನಮಗಾದ ಬಗೆ ಬಗೆಯ ಅನುಭವಗಳಿಂದ ನ
ಮ್ಮ ಮನಸ್ಸು ಹೆಚ್ಚಿಗೆ ವಿಕವ ವಾಗಿರುತ್ತದೆ.

ಈ ತರ್ಕವನ್ನು ದೃಢ ಪಡಿಸುವಕಾರಣ ವಿಸ್ಮೊಂದೇ
ನಂವರೆ, ಕೆಲಜನರು ವ್ಯಾಯ ಮೀರಿದ ವಯಸ್ಸಿನಲ್ಲಿ ಸಹ
ಹಲವ್ರ ಭಾಷೆಗಳನ್ನು ಬಹ್ರ ಹಗುರಾಗಿ ಕಲಿಯುತ್ತಾರೆ. ಕಾ
ರ್ಡಿನಲ್ ಮೆಝೋಫಾಂತಿ ಯೆಂಬವನು ವೃದ್ಧ ವಯಸ್ಸಿನಲ್ಲಿ
೫೦ ಭಾಷೆಗಳನ್ನು ಸಮರ್ಪಕವಾಗಿ ಕಲಿತನು. ಓಗಿಲ್ವಿ ಎಂ
ಬವನು ೪೦ ವರ್ಷ ಮೀರಿದ ಬಳಿಕ ಲಾಟಿನ್ ಗ್ರೀಕ ಭಾಷೆ
ಗಳನ್ನು ಕಲಿತು ಆ ಭಾಷೆಗಳಿಂದ ಮೇಲಾದ ಕಾವ್ಯಗಳಂನು
ಭಾಷಾಂತರಿಸಿದನು. ನಮ್ಮ ಕರ್ನಾಟಕ ಶೀಮೆಯಲ್ಲಿ ನವ
ಲಗುಂದದ ಜಾಯಪ್ಪ ದೆಸಾಯಿಯು ೧೮ ಭಾಷೆಗಳಂನು ಜ
ನ್ಮ ಭಾಷೆಯಂತೆ ಆಡುತ್ತಿದ್ದನೆಂದು ಕೇಳುತ್ತೇವೆ. ಹೊಸ
ಭಾಷೆಯನ್ನು ಕಲಿಯುವ ಆರಂಭದಲ್ಲಿ ಅವರೊಳಗಿನ ಶಬ್ದ

ಗಳು ದೊಡ್ಡದೊಂದು ಅಡವಿಯ ಹಾಗೆ ನಮ್ಮ ಕಣ್ಣೆದುರಿಗೆ ಕಾಣುತ್ತವೆ. ಆದರೆ ಒಳಿತಾಗಿ ಹೃಡುಕಿ, ಆ ಅಡವಿಯಲ್ಲೊಂದು ದಾರಿಯನ್ನು ತೆಗಿದು ಸ್ವಲ್ಪ ಮುಂದಕ್ಕೆ ಸಾಗಿದ ಬಳಿಕ. ಅದನ್ನು ದಾಟಿ ಹೋಗಲಿಕ್ಕೆ ಮೊದಲಿನಷ್ಟು ಕಷ್ಟ ತೋರುವದಿಲ್ಲ.

ಶಿಷ್ಟಕನಿಲ್ಲದೆ ಪರ ಭಾಷೆಯನ್ನು ಕಲಿಯ ಕೂಡದೆಂದು ಕೆಲವರ ಗ್ರಹಿಕೆಯುಂಟು. ಕುದ್ದೋಚ್ಚಾರಗಳನ್ನು ನಮಗೆ ತಿಳಿಸಿ ಹೇಳಲಿಕ್ಕೆ ಕೆಲವೊಬ್ಬ ಸಹಾಯಕನು ಆರಂಭದಲ್ಲಿ ಬೇಕೆಂಬದಕ್ಕೆ ಸಂದೇಹವಿಲ್ಲ. ಆದರೆ ಯಾವದೊಂದು ಭಾಷೆಯಲ್ಲಿ ಓದಲಿಕ್ಕೂ ಬರೆಯಲಿಕ್ಕೂ ಪರರ ಸಹಾಯವೆಷ್ಟು ಮಾತ್ರವೂ ಬೇಡ; ಕೈಯಲ್ಲೊಂದು ಪ್ರಸ್ತಕವಿದ್ದರೆ ಸಾಕು. ಮೇಲಾದ ಶಿಷ್ಟಕರಿಂದ ಕಲಿಸಲ್ಪಟ್ಟ ವಿದ್ಯವ್ಯ ಸರ್ವಕಾಲವೂ ಸರಿಯಾಗಿ ಫಲಿಸುವದಿಲ್ಲ. ಯಾಕಂದರೆ ವಿದ್ಯಾಭ್ಯಾಸದ ಕೆಲಸವಲ್ಲಿ ಕಲಿಯುವವನ ಪ್ರಯತ್ನದಷ್ಟು ಕಲಿಸುವವನ ಪ್ರಯತ್ನವು ಆವಶ್ಯಕವಲ್ಲ.

ಶಾಲೆಯಲ್ಲಿ ಮೊದಲನೇ ಸ್ಥಲ ಪಡೆದವನು ಪ್ರಥಮಾಪಬಳಿಕ ಮಾಡಿಕೆಯಾಗಿ ಮಂದಮತಿಯೆನಿಸಿ ಕೊಳ್ಳುತ್ತಾನೆ. ಎಷ್ಟೋ ಶಾಲೆಗಳಲ್ಲಿ ಈಗ ವಿಪರೀತ ಕ್ರಮವಾಗಿ ನಡೆಯುವ ವಿದ್ಯಾಭ್ಯಾಸದ ಮೇಲಾದ ವಿದ್ಯಾರ್ಥಿಯೆಂದು ಹೆಸರು ಪಡೆದವನು ಮೇಲಾದ ಮನುಷ್ಯನೆಂದೆಂದೂ ಅನಿಸಿ ಕೊಳ್ಳದೆ ಕಡೆತನಕ ಮೇಲಾದ ವಿದ್ಯಾರ್ಥಿಯೇ ಆಗಿ ಬಮುಕ ಬಹುದು. ಆದರೆ ಶಾಲೆಯಲ್ಲಿ ಕೆಲ ಬಾಲಕರು ದಡ್ಡರೆಂದು ಹೇಳಲ್ಪಡುತ್ತಾರೆ. ಅವರು ತಮ್ಮ ಸ್ವಂತ ಮನಸಿಗೆ ತಿಳಿದ ಮಾರ್ಗದಿಂದ ಅಭ್ಯಾಸ ಮಾಡಲಾಗಿ, ಆ ಮಾರ್ಗವು ಶಿಷ್ಟಕರಿಗೆ ಚನ್ನಾಗಿ ತಿಳಿಯದ ಕಾರಣ, ಅವರು ಅದಂಸು ಮೇರೆ ಮುಖವಿಲ್ಲದ

ಅಡ್ಡ ದಾರಿಯೆಂದು ಜರೆಯುತ್ತಾರೆ. ಇಂಥಾ ಹುಡುಗರು ಮಕ್ಕಲ್ಲಿ ಹುದುಗಿರುವ ಬುದ್ಧಿ ಕೌಶಲ್ಯವನು ಪ್ರಾಯದಲ್ಲಿ ಪ್ರಕಟಿಸಿ, ತಮ್ಮ ಸಂಗಡಿಗರಲ್ಲಿ ಶ್ರೇಷ್ಠರಾಗುವರು. ಸ್ವಂತ ಬುದ್ಧಿಯಿಂದ ವಿದ್ಯೆಯನ್ನು ಕಲಿತು ಕೊಂಡಂಥ ಮನುಷ್ಯನು ವ್ಯವಹಾರದಕ್ಷನಾಗುತ್ತಾನೆ. ಸ್ವಂತ ಬುದ್ಧಿಯಿಂದ ಏನಾದ್ರೇ ಗ ಮಾಡುವವರೇ ದೊಡ್ಡ ಮನುಷ್ಯರಾಗುತ್ತಾರೆ; ಸ್ವಂತ ಬುದ್ಧಿಯಿಂದ ವಿದ್ಯಾಭ್ಯಾಸ ಮಾಡುವವರೇ ಘನವಿದ್ವಾಂಸರಾಗುತ್ತಾರೆ.

ಆದರೆ ಶಿಕ್ಷಕನನ್ನು ಬಯಸದೆ ವಿದ್ಯೆಯಂನು ಕಲಿತು ಕೊಳ್ಳುವದು ಲೇಸೆಂದು ನಾವು ಮಾವಿಸುವವಲ್ಲ. ಇಕ್ಕಟ್ಟಿನ ಸ್ಥಳಗಳಲ್ಲಿ ಶಿಕ್ಷಕನ ಸಹಾಯ ಪಡಿದರೆ ಸ್ವಲ್ಪ ಕಮದಿಂದ ಅಲ್ಪ ಕಾಲದೊಳಗೆ ಬಹು ವಿಷಯಗಳಂನು ಕಲಿಯ ಬಹುದು. ಆದರೆ ಶಿಕ್ಷಕನು ಸಹಾಯ ಮಾತ್ರ ಮಾಡ ತಕ್ಕವನನ್ನೇ ಹೊತು ಇಂಥಿಂಥ ಬಗೆಯಿಂದ ಕಲಿಯೆಂದು ಆಜ್ಞಾಪಿಸ ತಕ್ಕವನಲ್ಲ. ಕೊಸಕ್ಕೆ ಬಾರದೆ ಬೇಸರ ಪಡಿಸುವಂಥ ಸಂಗತಿಗಳಂನು ಕಲಿಯು ಹೇಳಿ ಶಿಕ್ಷಕನು ಕಲಿಯುವವರನ್ನು ಯೆಪ್ಪು ಮಾತ್ರವೂ ತೊಂದರೆ ಪಡಿಸಲಾಗದು. ಯಾವದೊಂದು ನಡೆಯುವ ಪದ್ಧತಿಗನುಸಾರವಾಗಿ ವಿದ್ಯಾರ್ಥಿಗಳ ಬುದ್ಧಿಯಂನು ತಿದ್ದಲು ಪೇಕ್ಷಿಸುವ ಶಿಕ್ಷಕನು ತಕ್ಕ ಶಿಕ್ಷಕನಲ್ಲ. ನಾವು ನಮ್ಮ ಸ್ವಂತ ಪ್ರಯತ್ನದಿಂದ ಸಂಪಾದಿಸಿದ ಜ್ಞಾನವೇ ಸ್ಥಿರವಾಗಿ ನಿಲ್ಲುತ್ತದೆ. ಆ ನಮ್ಮ ಪ್ರಯತ್ನಕ್ಕೆ ಶಿಕ್ಷಕನ ಸಹಾಯವಿದ್ದರೆ ಲೇಸು. ಆದರೆ ಶಿಕ್ಷಕನು ಎಂಥಾ ಸಮರ್ಥನಿದ್ದಾಗ್ಯೂ ಬೊಡ್ಡಿಯಿಂದ ಕೊನೆವರಗೆ ಅವನಂನು ಹಿಂಬಾಲಿಸಿದರೆ ವ್ಯರ್ಥ ಕಾಲಹರಣ ಮಾತ್ರ ವಾಗುತ್ತದೆ. ಅವನು ನಮಗೆ ಕಲಿಯುವ ಮಾರ್ಗವಂನು ತೋರಿಸಬಹುದು; ಆದರೆ ನಮ್ಮ ಸಲುವಾಗಿ ತಾನೇ ಕಲಿ

ಯ ಲಾರನು. (ಮುಂದಕ್ಕೆ ಸಾಗುವದು)

ಭಾಷಾದರ್ಪಣ.

———000———

V ಸ್ವರವಿವರಣ—ಸ್ವ+ರ (ರಂಜ್=ಸಂತೋಷಿಸು) ಯಾವ ಪೆಯಲ್ಲಿ ಸ್ವತಃ ಸಂತೋಷ ಕೊಡುವವು ಅಥವಾ ಕೋಭಿಸುವವು.

(೧) ಹ್ರಸ್ವಸ್ವರ (ಸಂಸ್ಕೃತದಲ್ಲಿ)-'ಅಆ, ಇ, ಈ, ಉಊ, ಋಋೂ, ಌಌೂ' ಇವು ಹತ್ತು ವರ್ಣಗಳು ಎರಡೆರಡು ಸವರ್ಣಗಳಿದ್ದದರಿಂದ ಇವುಗಳಿಗೆ ಸಮಾನಸ್ವರವೆಂತಲೂ ಹೆಸರು. (೬ನೇ ಸೂ.)

(೨) ಸಂಧಿಸ್ವರ (ಸಂಸ್ಕೃತದಲ್ಲಿ)-ಏ (ಅ+ಇ), ಓ (ಅ+ಉ), ಈ ಪೂರೆಗೆ 'ಅ' ಕಾರದ ಮೇಲೆ ಅಸವರ್ಣ ಸ್ವರಗಳು ಕೂಡಿ ಆದದರಿಂದ ಇವುಗಳಿಗೆ ಸಂಧಿಸ್ವರವೆಂಬ ಹೆಸರು.

(೩) ಮಿಶ್ರಸ್ವರ (ಸಂಸ್ಕೃತದಲ್ಲಿ)-'ಐ (ಅ+ಏ), ಔ (ಅ+ಓ) ಈ ಪೂರೆಗೆ 'ಅ' ಕಾರದ ಮೇಲೆ ಸಂಧಿಸ್ವರಗಳು ಕೂಡಿ ಆದದರಿಂದ ಇವುಗಳಿಗೆ ಮಿಶ್ರಸ್ವರವೆಂಬ ಹೆಸರು.

(೪) *ನಾಮಿ-' ಇಈ ಉಊ ಋಋೂ ಌಌೂ ಏ ಐ, ಓ ಔ ಇವು ಹನ್ನೆರಡು ಬಾಗಿರುವ ಕಾರಣ ಇವುಗಳಿಗೆ ನಾಮಿ ಎಂಬ ಹೆಸರು (೯ನೆ ಸೂ.)

---

*ನಮ್=ಬಾ ಗು.

(೫) ಹ್ರಸ್ವ-'ಅ, ಇ, ಉ, ಋ, ಌ, ಎ, ಒ' ಇವ
ಕು ಒಂದೊಂದು ಮಾತ್ರೆ.†

(೬) ದೀರ್ಘ-'ಆ, ಈ, ಊ, ೠ, ೡ, ಏ, ಐ
ಓ, ಔ' ಇವು ಒಂಬತ್ತು ಎರಡೆರಡು ಮಾತ್ರೆ. ಮೂರು ಮಾ
ತ್ರೆಗೆ ಪ್ಲುತ ವೆಂಬ ಹೆಸರು. ಉದಾ. "ಕು ಕೂ ಕೋ" ಎಂ
ದು ಕೋಳಿ ಕೂಗಿದವಾಗಳ್ (೫. ೧೦ ನೇ ಸೂ.)

೯ ಕನ್ನಡದಲ್ಲಿ-'ಅಆ, ಇಈ, ಉಊ, ಎಏಐ, ಒ
ಓಔ' ಇವು ಹನ್ನೆರಡೂ ಶುದ್ಧ ಸ್ವರಗಳು. ಕಾರಣ ವೇನಂ
ದರೆ. ಇವು ಹನ್ನೆರಡೂ 'ಅ, ಇ, ಉ' ಸ್ವರಗಳಂತೆ ಸ್ವ
ಭಾವ ಸಿದ್ಧವಾದವುಗಳಾಜದರಿಂದ ಇವು ಸ್ವರಗಳ ಮೇಲೆ ಪ
ರವಾದಾಗ ಮುಂಚಿನ ಸ್ವರಗಳು ಲೋಪವಾಗಿ ಇವೇ ನಿಲ್ಲ
ವವು (೫. ೪ ನೇ ಸೂ.)

೧೦ ವ್ಯಂಜನವಿವರಣ-ವಿ+ಅಂಜನ (ಅಜ್=ಮಾತಾ
ಡು. ಅಥವಾ ಅಂಜ್=ಸ್ಪಷ್ಟವಾಗಿ ಮಾತಾಡು. ಅ ಎನ್ನೆ ಹ
ಜ್ಜ) ಭಾಷೆಯಲ್ಲಿ ವಿಶೇಷವಾಗಿ ಸ್ಪಷ್ಟೀಕರಣ ಮಾಡುವವ್ರ.

(೧) ವ್ಯಂಜನಗಳಲ್ಲಿ 'ಕ' ಕಾರ ಮೊದಲೊಂಡು
'ಮ' ಕಾರದ ವರೆಗೆ ಇಪ್ಪತ್ತೈದು ವರ್ಗೀಯಗಳು; ಇವ್ರುಗ
ಳಲ್ಲಿ 'ಕ, ಚ, ಟ, ತ, ಪ' ಎಂಬವ್ಕೈದು ವರ್ಗಗಳು.
ಒಂದೊಂದು ವರ್ಗದೊಳಗಿನ ಐದೈದು ವರ್ಣಗಳು ಬಾಯೊ
ಳಗೆ ಒಂದೇ ಸ್ಥಾನದಲ್ಲಿ ಹುಟ್ಟುವ ಕಾರಣ ಒಂದೇ ವರ್ಗದ
ವು (ಸವರ್ಣ) ಆದವ್ರು. 'ಯ' ಕಾರ ಮೊದಲೊಂಡು 'ಳ'
ಕಾರದ ವರೆಗೆ ಒಂಬತ್ತು ವರ್ಣಗಳು ಬೇರೆ ಬೇರೆ ಸ್ಥಾನಗ
ಳಲ್ಲಿ ಹುಟ್ಟುವ ಕಾರಣ ಅವರ್ಗೀಯಗಳೆನಿಸುವವ್ರು (೫.

† ಮಾತ್ರೆ ಅಂದರೆ ಅಕ್ಷರವನ್ನು ಉಚ್ಚರಿಸುವದಕ್ಕೆ ಹತ್ತುವ ಕಾ
ಲ ಪ್ರಮಾಣ.

೨೩ ನೆ ಸೂ.)

(೨) ವರ್ಗಗಳ ೧ನೇ, ೩ನೇ ವರ್ಣಗಳೂ 'ಯ, ರ, ಲ, ವ, ಳ' ಕಾರಗಳೂ ಅಲ್ಪಶ್ವಾಸದಿಂದ ಉಚ್ಚಾರವಾಗುವ ಕಾರಣ ಇವುಗಳಿಗೆ ಅಲ್ಪಪ್ರಾಣ* ವೆಂತಲೂ; ವರ್ಗಗಳ ೨ನೆ, ೪ನೆ ವರ್ಣಗಳೂ 'ಕ, ಪ, ಸ, ಹ' ಕಾರಗಳೂ ವಿಶೇಷ ಶ್ವಾಸದಿಂದ ಉಚ್ಚಾರವಾಗುವ ಕಾರಣ ಇವುಗಳಿಗೆ ಮಹಾಪ್ರಾಣ† ವೆಂತಲೂ ಪೆಸರು. ಮಹಾಪ್ರಾಣದ ಉಚ್ಚಾರದಲ್ಲಿ 'ಹ' ಕಾರದ ಅಂಶವುಂಟು. ಕನ್ನಡದಲ್ಲಿ ಮಹಾಪ್ರಾಣಗಳಿಲ್ಲೆಂದು ಕೆಲವರು ಅನ್ನುತ್ತಾರೆ; ಆದರೆ ಕನ್ನಡದಲ್ಲಿ ಮಹಾಪ್ರಾಣಗಳುಂಟೆಂದು ೪೫ನೆ ಸೂತ್ರದಲ್ಲಿ ಬರೆದಿದೆ. ಉದಾ. ಖಾವು ಘಟ್ಟ, ಛಂಕಣೆ; ಝಳಿ; ಭಂಗಾರ; ಠುಲ್ಲಿ; ಢುಳಂ; ಥುಳಕಂ; *ಘಾಸೆ ಇತ್ಯಾದಿ.

(೩) ವರ್ಗಗಳ ೫ನೆ ವರ್ಣಗಳಾದ 'ಙ, ಞ, ಣ, ನ, ಮ' ಕಾರಗಳು ನಾಸಿಕೆಯ ಸಹಾಯದಿಂದ ಉಚ್ಚಾರವಾಗುವ ಕಾರಣ ಅನುನಾಸಿಕವೆನಿಸುವವು.

(೪) ಶ ಷ ಸ ಹ, ಕಾರಗಳ ಉಚ್ಚಾರವು ಉಷ್ಣಶ್ವಾಸದಿಂದಾಗುವ ಕಾರಣ ಇವುಗಳಿಗೆ ಉಷ್ಮವರ್ಣಗಳೆಂಬ ಪೆಸರು. ಯ, ರ, ಲ, ವ, ಇವು ಳ ಕಾರದಿಂದ 'ಇ, ಐ, ಋ, ಉ, ಊ' ಇವುಗಳ ಅಂತಸ್ಥಗಳೆನಿಸುವವು. ಇವುಗಳಬಗ್ಗೆ ಮುಂದೆ ಯಣ್ ಸಂಧಿಯಲ್ಲಿ ನೋಡಬೇಕು; ಅಂದರೆ ಮನನರಿಕೆ

---

*ಪ್ರಾಣ=ಕರ್ಣೇಂದ್ರಿಯದೊಳಗಿನ ವಾಯು. ೨ ಪರಾಕ್ರಮ.

†ಇಂಗ್ಲಿಷಿನ ಮಹಾಪ್ರಾಣಗಳಲ್ಲಿ 'ಹ' ಕಾರದ ಅಂಶವುಂಟು. ಉದಾ. Dh=ಧ, Bh=ಭ, Ph=ಫ ಇತ್ಯಾದಿ.

*"ಘಾಸೆ ಯಾಗೆನು ಭಯದೊಳು ಧರಿತ್ರ್ಯಧಿಕೆಯನು ಕೆಳದು ಕೊಂಡು ಯಾತಿಪ"

ಸರ್ವಜ್ಞಭೂಪಾಲ ಕವಿ.

ಯೂಗುವದು.

(೫) ಕ, ಖ, ಚ, ಛ, ಟ, ಠ, ತ, ಥ, ಪ, ಫ, ಶ, ಷ, ಸ, ಹ ಇವು ೨೫ ಅಘೋಷವರ್ಣಗಳು (ಕಠಿಣವರ್ಣಗಳು) ಗ, ಘ, ಜ, ಝ, ಡ, ಢ, ಣ, ದ, ಧ, ನ, ಬ, ಭ, ಮ, ಯ, ರ, ಲ, ವ, ಹ ಇವು ೨೦ ಹಾಗೂ ಇಳಿ ಸ್ವರಗಳು ಅಂತೂ ೩೫ ಘೋಷವರ್ಣಗಳು (ಮೃದು ವರ್ಣಗಳು).

೧೧ ಯೋಗವಾಹವಿವರಣ—ಯೋಗ+ವಾಹ (ಕೂಡು ವಿಕೆಯನ್ನು ವಹಿಸಿರುವವ್ಯ.) (೦) (ಃ) ಈ ಅನುಸ್ವಾರವಿಸರ್ಗ ಗಳು ಸ್ವರದಮೇಲೆ ಬರುವದರಿಂದಲೇ ಉಚ್ಚಾರವಾಗುತ್ತವಲ್ಲದೆ ಇವ್ರುಗಳಿಗೆ ಸ್ವತಂತ್ರೋಚ್ಚಾರವಿಲ್ಲ; ಆ ಕಾರಣ ಕೆಲವು ವ್ಯಾಕರಣಕಾರರು ಇವ್ರುಗಳನ್ನು ಸ್ವರಾಂಗದೊಳಗೆ ಎಣಿಸುತ್ತಾರೆ. "ಮೋನುಸ್ವಾರಃ" "ಸ್ರೋವಿಸರ್ಗಾಃ" ಎಂಬ ಸೂತ್ರಗಳಿಂದ ಮ್=ಂ, ಸ್ ಅಥವಾ ರ್=ಃ ಇದ್ದ ಕಾರಣ ಕೆಲವು ವ್ಯಾಕರಣಕಾರರು ಇವ್ರುಗಳಂನು ವ್ಯಂಜನಾಂಗದೊಳಗೆ ಎಣಿಸುತ್ತಾರೆ (೫. ೧೨ ನೆ ಸೂ.) ಇದೇ ಅರ್ಥದಿಂದ ಶಾಲಾವ್ಯಾಕರಣಕಾರನು ತನ್ನ ೨ನೆ ಪಕ್ಕದಲ್ಲಿ "ಸ್ವರಗಳಿಗೂ ವ್ಯಂಜನಗಳಿಗೂ ನಡುವಿನಲ್ಲಿ ಇರುವ ಅಕ್ಷರಗಳು ಯಾವವ್ಯ?" ಎಂಬದಾಗಿ ಬರೆದಿದ್ದಾನೆ. ಈ ಪ್ರಕಾರ ಅನುಸ್ವಾರ ವಿಸರ್ಗಗಳು ಸ್ವರ ವ್ಯಂಜನಗಳ ಯೋಗವನ್ನು ವಹಿಸಿದುವದರಿಂದಲೇ ಇವ್ರುಗಳಿಗೆ ಯೋಗವಾಹಗಳೆಂಬ ಹೆಸರು.

(೨) ಅನುಸ್ವಾರವ್ಯ (೦) ಯಾವವರ್ಗೀಯಾಕ್ಷರದ ಹಿಂದೆ ಬರುತ್ತದೋ ಆ ವರ್ಗದ ಅನುನಾಸಿಕದಂತೆ ಉಚ್ಚಾರವಾಗುತ್ತದೆ. ಆ ಕಾರಣ ಅನುಸ್ವಾರಕ್ಕೆ ಬದಲಾಗಿ ಆ ಆ ವರ್ಗದ ಅನುನಾಸಿಕಕ್ಕೆ ಆ ಆ ವರ್ಗದ ಅಕ್ಷರವನ್ನು ಒತ್ತು ಬರೆದರೂ ಸಾಗುವದು. ಉದಾಃ ಕೊಂಕು = ಕೊಙ್ಕು, ಅಂಕ=ಅಙ್ಕ

ಂಜು=ಅಞ್ಜು, ಚಂಚಲ=ಚಞ್ಚಲ ಗಂಡು=ಗಣ್ಡು. ಕಂಠ=
ಕಣ್ಠ, ಅಂತ್ಯ=ಅನ್ತ್ಯ. ಸಂತಾನ= ಸನ್ತಾನ ಕೆಂಮು=ಕೆಮ್ಮು
ಇತ್ಯಾದಿ.

(೨) ಅವಗ್ರೀಯಗಳ ಹಿಂದಿನ ಅನುಸ್ವಾರದ ಉಚ್ಚಾರ
ಸೊಳಗೆ ನ್ ಕಾರದ ಉಚ್ಚಾರವಾಗುವದು. ಯ, ಕಾರದ
ಹಿಂದಿನ ಅನುಸ್ವಾರದಲ್ಲಿ ಮಾತ್ರ ಶುದ್ಧ ಅನುಸ್ವಾರದ ಉ
ಚ್ಚಾರವಾಗುತ್ತದೆ. ಉದಾಃ ಸಂಯೋಗ ಸಂರಕ್ಷಿಸು, ಸಂಲಕ್ಷೆ
ಣ, ಸಂವತ್ಸರ, ಅಂಕ, ಹಂಸ ಸಂಹಾರ, ಸಿಂಹ ಇತ್ಯಾದಿ.

(೩) ಕನ್ನಡ ಶಬ್ದಗಳೊಳಗಿನ ಅವಗ್ರೀಯಗಳ ಹಿಂದೆ
ಅನುಸ್ವಾರವು* ಬರುವದಿಲ್ಲ.

(೪) ವಿಸರ್ಗದ (ಃ) ಉಚ್ಚಾರಣೆಯು 'ಹ್' ಕಾರ
ಕ್ಕೆ ಸರಿಯದೆ. ಉದಾ. ಪ್ರಾತಃಕಾಲ, ಅಂತಃಕರಣ, ಮನಃ
ಪೂರ್ವಕ ಇತ್ಯಾದಿ. (ಮುಂದೆ ಸಾಗುವದು)

ಗಂಗಾಧರ ಮಡಿವಾಳೇಶ್ವರ ತೂರಮರಿ
ಅ. ಶ್ರಾ ನಸ್ಲೀಟರ್

ಪದಾರ್ಥವಿಜ್ಞಾನ ಸಂಬಂಧದ ಪ್ರಶ್ನೋತ್ತರಗಳು.

——000——

ಪ್ರಶ್ನ-ಉಷ್ಣತ್ವ ವೆಂದರೇನು?

ಉತ್ತರ-ನಮಗೆ ಉಬ್ಬಿಯ ಅನುಭವವಂನುಂಟು ಮಾಡು
ವ ಒಡವಿಯು.

---

*"ಸಂಪಟು, ಅಂಸಚು, ತಂಪಟು" ಎಂದು ಹಲಕೆಲವರು ಗ್ರಾ
ಮ್ಯೋಚ್ಚಾರದಿಂದ ನುಡಿದಾಗ್ಯೂ, ಇವುಗಳ ಸರಿಯಾದ ಉಚ್ಚಾರವು
"ಸಾಟು, ಅವಚು, ಕಾಟು" ಎಂದಾಗುವದು.

ಪ್ರ.–ಈ ಅನುಭವವು ಹ್ಯಾಗೆ ಉಂಟಾಗುತ್ತದೆ?

ಉ.–ಕಣ್ಣಿಗೆ ಕಾಣಿಸದೆ ಎಲ್ಲ ಕಡೆಯಲ್ಲಿ ಹಬ್ಬಿ ಗಾ
ಳ್ಳುವಂಥಾದ್ದೊಂದು ಪ್ರವಾಹದಿಂದುಂಟಾಗುತ್ತದೆ.
ಈ ಪ್ರವಾಹವು ಪಚ್ಚೆಗೆ ಬಿಸಿಯಾಗಿದ್ದ ಪದಾರ್ಥ
ದಿಂದ ಹೊರಟು ನಮಗೆ ತಗಲಿದರೆ, ನಮಗೆ
ಕಕೆಯಾಗುತ್ತದೆ.

ಪ್ರ.–ಉಷ್ಣತ್ವವು ಎಲ್ಲೆಲ್ಲಿ ಹುಟ್ಟುತ್ತದೆ?

ಉ.–ಸೂರ್ಯ, ವಿದ್ಯುತ್ತು, ರಸಾಯನ ವ್ಯಾಪಾರ, ಯಂ
ತ್ರ ವ್ಯಾಪಾರ, ಇವುಗಳಲ್ಲಿ ಹುಟ್ಟುತ್ತದೆ.

ಪ್ರ.–ಉಷ್ಣತ್ವದ ಮುಖ್ಯ ಪರಿಣಾಮಗಳು ಯಾವುವು?

ಉ.–ಅದರಿಂದ ಪದಾರ್ಥಗಳ ಆಕಾರವು ಬೆಳೆಯುತ್ತದೆ;
ಪದಾರ್ಥಗಳು ರಸರೂಪವಾಗುತ್ತವೆ, ಹೊಗೆಯ
ರೂಪವನ್ನು ಹೊಂದುತ್ತವೆ, ಸುಡಲ್ಪಡುತ್ತವೆ,
ಇತ್ಯಾದಿ.

ಪ್ರ.–ಸೃಷ್ಟಿಯಲ್ಲಿ ಉಷ್ಣತ್ವಕ್ಕೆ ಮುಖ್ಯವಾದ ಉಗಮ
ಸ್ಥಾನ ಯಾವದು?

ಉ.–ಸೂರ್ಯನು.

ಪ್ರ.–ಸುಡುವ ಕಾಜಿನ ಮುಂದೆ ಹಿಡಿದ ಪದಾರ್ಥವು ಯಾ
ಕೆ ಸುಡುತ್ತದೆ?

ಉ.–ಆ ಕಾಜು ಬಟ್ಟಲಿನಹಾಗೆ ಕಂಸಾಕೃತಿಯಾಗಿರುತ್ತ
ದೆ. ಅದರ ಹೊರಮೈಯಲ್ಲಿ ಸೂರ್ಯಕಿರಣಗಳು
ಬೀಳಲಾಗಿ, ಅವು ಒಳಮೈಯಲ್ಲಿ ವಕ್ರವಾಗಿ
ಹೊರಬಿದ್ದು ಅದರ ನಡುಗರ್ಭದೆಡೆಯಿರಿಗೊಂದು
ಬಿಂದುವಿನಲ್ಲಿ ಒಟ್ಟುಗೂಡುತ್ತವೆ. ಆ ಕಾರಣ
ಆ ಕಾಜಿನ ಮೇಲೆ ಬಿದ್ದ ಕಿರಣಗಳ ಉಷ್ಣತ್ವ

ವೂ ಪ್ರಕಾಶವೂ ಎಲ್ಲ ಆ ಬಿಂದುವಿನಲ್ಲಿ ಒ
ಟ್ಟುಗೂಡಿರುತ್ತದೆ. ಅದರಿಂದ ಆ ಬಿಂದುವಿನಲ್ಲಿ
ಹಿಡಿದ ಪದಾರ್ಥಗಳು ಸುಡುತ್ತವೆ. ಆ ಬಿಂದುವಿ
ಗೆ ಕೇಂದ್ರ ವೆಂನುವರು.



ಪ್ರ.-ಸುಡುವ ಕಾಜಿಲ್ಲದೆ ಹಾಗೇ ಸೂರ್ಯ ಕಿರಣಗಳಿಂದ
ಪದಾರ್ಥಗಳು ಸುಡುವವ್ಹೋ?

ಉ.-ಇಲ್ಲ; ಅತ್ಯುಷ್ಣ ಪ್ರದೇಶಗಳಲ್ಲಿ ಸಹ ಸೂರ್ಯ ಕಿ
ರಣಗಳಂನು ಸುಡುವ ಕಾಜಿನಿಂದ ಒಟ್ಟು ಗೂ
ಡಿಸಿದ ಹೊರ್ತು ಅವುಗಳಿಂದ ಪದಾರ್ಥಗಳಿಗೆ
ಬೆಂಕಿ ಹತ್ತುವದಿಲ್ಲ.

೨೦ನೇ ಪ್ರಕರಣ.

ಪ್ರ.-ಸೂರ್ಯನ ತರುವಾಯ ಉಷ್ಣತ್ವದ ಮುಖ್ಯ ಸ್ಥಾನ
ಯಾವದು?

ಉ.-ವಿದ್ಯುತ್ತು.

ಪ.-ಸೃಷ್ಟಿಯಲ್ಲಿ ವಿದ್ಯುತ್ತು ಯಾವ ರೂಪದಿಂದ ವ್ಯ
ಕ್ತ ವಾಗುತದೆ?

ಉ.-ಮಿಂಚೆಂಬ ರೂಪದಿಂದ ವ್ಯಕ್ತ ವಾಗುತದೆ.

ಪ.-ಮಿಂಚೆಂದರೇನು?

ಉ.-ಮೋಡಗಳಲ್ಲಿ ಮಿತಿ ಮೀರಿ ಕೂಡಿ ಕೊಂಡಂಥ
ವಿದ್ಯುತ್ತು ಅವುಗಳಿಂದ ಮಿಂಚುತ್ತ ಹೊರಬಿತ್ತೆಂ

ದರೆ ಅದಕ್ಕೆ ನಾವು ಮಿಂಚೆನ್ನುತ್ತೇವೆ.

ಪ್ರ.-ವಿದ್ಯುತ್ತು ಎಷ್ಟು ವಿಧವ್ರ?

ಉ.-ಧನವಂತರೂ ಋಣವಂತರೂ ಎರಡು ವಿಧವ್ರ.

ಪ್ರ.-ಈ ಎರಡು ಜಾತಿಯವಿದ್ಯುತ್ತು ಪದಾರ್ಥಗಳಲ್ಲಿ ಇರುವ ಕ್ರಮ ಹ್ಯಾಗೆ?

ಉ.-ಎಲ್ಲ ಪದಾರ್ಥಗಳಲ್ಲಿ ವಿದ್ಯುತ್ತುಂಟು. ಮಾಡಿಕೆಯಾಗಿ ಎರಡೂ ಜಾತಿಯ ವಿದ್ಯುತ್ತು ಒತ್ತಟ್ಟಿಗೆ ಕೂಡಿಕೊಂಡಿರುತ್ತದೆ. ಹಾಗಿರುವಾಗ ಅದು ಇರುತ್ತದೆಂಬದರ ಕುರುಹೇನು ಕಾಣಿಸುವದಿಲ್ಲ. ಆದರೆ ಹಲಕೆಲವ್ರ ಕಾರಣಗಳಿಂದ ಈ ಎರಡು ಜಾತಿಗಳು ಒಂದನ್ನೊಂದು ಅಗಲಿದರೆ, ಅವ್ರು ಪುನಃ ಕೂಡಿಕೊಳ್ಳಲಿಕ್ಕೆ ಹವಣಿಸುತ್ತಿರುತ್ತವೆ. ಹೀಗೆ ಅಗಲಿರುವಾಗ ಪದಾರ್ಥಗಳಲ್ಲಿ ವಿದ್ಯುತ್ತು ಉಂಟಿಬದರ ಲಕ್ಷಣಗಳು ಬಗೆ ಬಗೆಯ ರೂಪದಿಂದ ಪ್ರಕಟವಾಗುತ್ತವೆ.

ಪ್ರ.-ಮೋಡಗಳಿಂದ ವಿದ್ಯುತ್ತು ಮಿಂಚಿನ ರೂಪದಿಂದ ಹೊರಬೀಳುವ ಕಾರಣ ಏನು?

ಉ.-ಕೆಲವ್ರ ಮೋಡಗಳಲ್ಲಿ ಧನ ವಿದ್ಯುತ್ತೂ ಕೆಲವ್ರಗಳಲ್ಲಿ ಋಣ ವಿದ್ಯುತ್ತೂ ಕೂಡಿರುತ್ತದೆ. ಹೀಗೆ ವಿರುದ್ಧ ಜಾತಿಯ ವಿದ್ಯುತ್ತುಳ್ಳ ಮೋಡಗಳೆರಡು ಒಂದನ್ನೊಂದು ಸಮೀಪಿಸಿದರೆ ಒಂದರೊಳಗಿನ ವಿದ್ಯುತ್ತು ಮಿಂಚುತ್ತ ಹೊರಬಿದ್ದು, ಮತ್ತೊಂದರೊಳಗೆ ಕೇರಿ, ಎರಡೂ ಮೋಡಗಳಲ್ಲಿ ಎರಡೂ ಜಾತಿಯ ವಿದ್ಯುತ್ತು ಸಮ ಸಮಾನವಾಗುತ್ತದೆ. ಭೂಮಿಯಲ್ಲಿ ಕೇರಿಕೊ

ಳ್ಳುವದಕ್ಕೂ ಮೋಡಗಳಿಂದ ವಿದ್ಯುತ್ತು ಹೊರ
ಬೀಳುತ್ತದೆ.

ಪ್ರ.-ಎರಡೂ ಜಾತಿಯ ವಿದ್ಯುತ್ತು ಒತ್ತಟ್ಟಿಗೆ ಕೂಡಿ
ಕೊಂಡಬಳಿಕ ಏನಾಗುತ್ತದೆ?

ಉ.-ಅದು ಅಗೋಚರ ವಾಗುತ್ತದೆ.

ಪ್ರ.-ಗುಡುಗಂದರೇನು?

ಉ.-ಮೋಡಗಳಿಂದ ವಿದ್ಯುತ್ತಿನ ಪ್ರವಾಹಗಳು ಒಂದರ
ಹಿಂದೊಂದು ಎಡೆ ಬಿಡದೆ ಅತಿ ವೇಗದಿಂದ
ಹೊರಟು ಹವೆಗೆ ತಗಲಲಾಗಿ ಹುಟ್ಟುವ ಸಪ್ಪಳ
ವೇ ಗುಡುಗೆಂದು ಹೇಳಲ್ಪಡುತ್ತದೆ.

ಪ್ರ.-ವಿದ್ಯುತು ಮೋಡಗಳಲ್ಲಿ ಎಲ್ಲೆಲ್ಲಿಂದ ಶೇರುತ್ತದೆ?

ಉ.-ನೀರು ಉಗಿಯಾಗಿ ಮೇಲಕ್ಕೇರುವಾಗ ಅದರ ಸಂ
ಗಡ ಹೋಗುತ್ತದೆ. ಭೂಮಿಯಮೇಲೆಯೂ ಹವೆ
ಯಲ್ಲಿಯೂ ಆಗಾಗ್ಗೆ ನಡೆಯುವ ರಸಾಯನ ವ್ಯಾ
ಪಾರಗಳಿಂದ ಹುಟ್ಟಿ ಮೋಡಗಳಲ್ಲಿ ಶೇರುತ್ತದೆ ಇ.

ಪ್ರ- ಮಿಂಚೆಸ ಮೋಡಗಳು ಭೂಮಿಯಿಂದ ಎಷ್ಟು
ದೂರವಿರುತ್ತವೆ?

ಉ.-ಅವು ಒಮ್ಮೊಮ್ಮೆ ನಾಲ್ಕೈದು ಮೈಲುಗಳ ಆಚೆ
ಯಲ್ಲಿರುತ್ತವೆ; ಒಮ್ಮೊಮ್ಮೆ ನೆಲಕ್ಕೆ ಹತ್ತಿರುತ್ತವೆ.
ಆದರೆ ೬೦೦ ನೂರು ಘೂಟುಗಳೀಚೆಯಲ್ಲಿ ಅ
ವುಗಳಿಂದ ಬಹು ತರ ಗುಡುಗು ಹುಟ್ಟುವದಿಲ್ಲ.

ಪ್ರ.-ಗುಡ್ಡಗಳೂ, ಮರಗಳೂ, ಪಕ್ಷುಗಳೂ ಮಿಂಚು ಹೊ
ರಡಲಿಕ್ಕೆ ಕಾರಣ ವಾಗುತ್ತವೆಯೋ?

ಉ.-ಆಗುತ್ತವೆ. ಯಾಕಂದರೆ ಭೂಮಿಗೂ ಮೋಡಗಳಿ
ಗೂ ಇರುವ ಅಂತರವನ್ನು ಇವುಗಳಿಂದ ಕಡಿಮೆ

ದರೆ ಅದಕ್ಕೆ ನಾವು ಮಿಂಚೆನ್ನುತ್ತೇವೆ.

ಪ್ರ.-ವಿದ್ಯುತ್ತು ಎಷ್ಟು ವಿಧವ್ರ?

ಉ.-ಧನವಂತೇಲೂ ಋಣವೆಂತೇಲೂ ಎರಡು ವಿಧವ್ರ.

ಪ್ರ.-ಈ ಎರಡು ಜಾತಿಯವಿದ್ಯುತ್ತು ಪದಾರ್ಥಗಳಲ್ಲಿ ಇರುವ ಕ್ರಮ ಹ್ಯಾಗೆ?

ಉ.-ಎಲ್ಲ ಪದಾರ್ಥಗಳಲ್ಲಿ ವಿದ್ಯುತ್ತುಂಟು. ಮಾಡಿಕೆಯಾಗಿ ಎರಡೂ ಜಾತಿಯ ವಿದ್ಯುತ್ತು ಒತ್ತಟ್ಟಿಗೆ ಕೂಡಿಕೊಂಡಿರುತ್ತದೆ. ಹಾಗಿರುವಾಗ ಅದು ಇರುತ್ತದೆಂಬುದರ ಕುರುಹೇನು ಕಾಣಿಸುವದಿಲ್ಲ. ಆದರೆ ಹಲಕೆಲವ್ರ ಕಾರಣಗಳಿಂದ ಈ ಎರಡು ಜಾತಿಗಳು ಒಂದನ್ನೊಂದು ಅಗಲಿದರೆ, ಅವ್ರು ಪ್ರನಃ ಕೂಡಿಕೊಳ್ಳಲಿಕ್ಕೆ ಹವಣಿಸುತ್ತಿರುತ್ತವೆ. ಹೀಗೆ ಅಗಲಿರುವಾಗ ಪದಾರ್ಥಗಳಲ್ಲಿ ವಿದ್ಯುತ್ತು ಉಂಟೆಬುದರ ಲಕ್ಷಣಗಳು ಬಗೆ ಬಗೆಯ ರೂಪದಿಂದ ಪ್ರಕಟವಾಗುತ್ತವೆ.

ಪ್ರ.-ಮೋಡಗಳಿಂದ ವಿದ್ಯುತ್ತು ಮಿಂಚಿನ ರೂಪದಿಂದ ಹೊರಬೀಳುವ ಕಾರಣ ಏನು?

ಉ.-ಕೆಲವ್ರ ಮೋಡಗಳಲ್ಲಿ ಧನ ವಿದ್ಯುತ್ತೂ ಕೆಲವ್ರುಗಳಲ್ಲಿ ಋಣ ವಿದ್ಯುತ್ತೂ ಕೂಡಿರುತ್ತದೆ. ಹೀಗೆ ವಿರುದ್ಧ ಜಾತಿಯ ವಿದ್ಯುತ್ತುಳ್ಳ ಮೋಡಗಳೆರಡು ಒಂದನ್ನೊಂದು ಸಮೀಪಿಸಿದರೆ ಒಂದರೊಳಗಿನ ವಿದ್ಯುತ್ತು ಮಿಂಚುತ್ತ ಹೊರಬಿದ್ದು ಮತ್ತೊಂದರೊಳಗೆ ಕ್ಷೀರಿ, ಎರಡೂ ಮೋಡಗಳಲ್ಲಿ ಎರಡೂ ಜಾತಿಯ ವಿದ್ಯುತ್ತು ಸಮ ಸಮಾನವಾಗುತದೆ. ಭೂಮಿಯಲ್ಲಿ ಕ್ಷೀರಿಕೊ

ಳ್ಳುವದಕ್ಕೂ ಮೋಡಗಳಿಂದ ವಿದ್ಯುತ್ತು ಹೊರ ಬೀಳುತ್ತದೆ.

ಪ್ರ.-ಎರಡೂ ಜಾತಿಯ ವಿದ್ಯುತ್ತು ಒತ್ತಟ್ಟಿಗೆ ಕೂಡಿ ಕೊಂಡಬಳಿಕ ಏನಾಗುತ್ತದೆ?

ಉ.-ಅದು ಅಗೋಚರವಾಗುತ್ತದೆ.

ಪ್ರ.-ಗುಡುಗುಂದರೇನು?

ಉ.-ಮೋಡಗಳಿಂದ ವಿದ್ಯುತ್ತಿನ ಪ್ರವಾಹಗಳು ಒಂದರ ಹಿಂದೊಂದು ಎಡೆ ಬಿಡದೆ ಅತಿ ವೇಗದಿಂದ ಹೊರಟು ಹವೆಗೆ ತಗಲಲಾಗಿ ಹುಟ್ಟುವ ಸಪ್ಪಳವೇ ಗುಡುಗೆಂದು ಹೇಳಲ್ಪಡುತ್ತದೆ.

ಪ್ರ.-ವಿದ್ಯುತ್ತು ಮೋಡಗಳಲ್ಲಿ ಎಲ್ಲೆಲ್ಲಿಂದ ಶೇರುತ್ತದೆ?

ಉ.-ನೀರು ಉಗಿಯಾಗಿ ಮೇಲಕ್ಕೇರುವಾಗ ಅದರ ಸಂಗಡ ಹೋಗುತ್ತದೆ. ಭೂಮಿಯಮೇಲೆಯೂ ಹವೆಯಲ್ಲಿಯೂ ಆಗಾಗ್ಗೆ ನಡೆಯುವ ರಸಾಯನ ವ್ಯಾಪಾರಗಳಿಂದ ಹುಟ್ಟಿ ಮೋಡಗಳಲ್ಲಿ ಶೇರುತ್ತದೆ ಇ.

ಪ್ರ- ಮಿಂಚಿನ ಮೋಡಗಳು ಭೂಮಿಯಿಂದ ಎಷ್ಟು ದೂರವಿರುತ್ತವೆ?

ಉ-ಅವು ಒಮ್ಮೊಮ್ಮೆ ನಾಲ್ಕೈದು ಮೈಲುಗಳ ಅಚೆಯಲ್ಲಿರುತ್ತವೆ; ಒಮ್ಮೊಮ್ಮೆ ನೆಲಕ್ಕೆ ಹತ್ತಿರುತ್ತವೆ. ಆದರೆ ೬೦೦ ನೂರು ಘೂಟುಗಳೀಚೆಯಲ್ಲಿ ಅವುಗಳಿಂದ ಬಹು ತರ ಗುಡುಗು ಹುಟ್ಟುವದಿಲ್ಲ.

ಪ್ರ.-ಗುಡ್ಡಗಳೂ, ಮರಗಳೂ, ಪಶುಗಳೂ ಮಿಂಚು ಹೊರಡಲಿಕ್ಕೆ ಕಾರಣವಾಗುತ್ತವೆಯೇ?

ಉ.-ಆಗುತ್ತವೆ. ಯಾಕಂದರೆ ಭೂಮಿಗೂ ಮೋಡಗಳಿಗೂ ಇರುವ ಅಂತರವನ್ನು ಇವುಗಳಿಂದ ಕಡಿಮೆ

ಯಾಗುತ್ತದೆ.

ಪ್ರ.–ಮಿಂಚು ಬಿಳಿಬೊಡೆಯುವ ಕಾರಣ ವೇನು?

ಉ–ಒಂದು ಮೋಡದಿಂದ ಮೊದಲು ಒಂದೇ ಪ್ರವಾ
ವಾಗಿ ಹೊರಟಂಥ ವಿದ್ಯುತ್ತು ಮಾರ್ಗದಲ್ಲಿ ಒ
ದಕ್ಕಿಂತ ಹೆಚ್ಚು ಪದಾರ್ಥಗಳಿಂದ ಎಳೆಯಲ್ಪ
ಟ್ಟರೆ, ಆ ಪ್ರವಾಹದಲ್ಲಿ ಎರಡು ಮೂರು ಬಿಳಿ
ಲುಗಳಾಗುತ್ತವೆ.

ಪ್ರ–ಮಿಂಚು ಹಾವಿನ ಹಾಗೆ ಮಣಿಯುವ ಕಾರಣ ವೇನು?

ಉ.–ವಿದ್ಯುತ್ತು ಹೊರಡುವಾಗ ಅದರ ಪೆಟ್ಟಿನಿಂದ ಅದ
ರ ಮಾರ್ಗದಲ್ಲಿರುವ ಹವೆಯು ಘನವಾಗುತ್ತದೆ
ಆ ಘನವಾದ ಹವೆಯು ಅದ್ದಿಯನ್ನು ತಪ್ಪಿಸುವದ
ಕ್ಕೋಸ್ಕರ ಮಿಂಚು ಡೊಂಕಾಗುತ್ತದೆ.

ಪ್ರ.–ಮಿಂಚು ಯಾವಾಗ ಸರಳ ವಿರುತ್ತದೆ?

ಉ.–ಮಿಂಚು ಕ್ರಮಿಸ ಬೇಕಾಗಿರುವ ಅಂತರವು ಅಲ್ಪ
ವಿದ್ದರೆ, ಆ ಮಾರ್ಗದೊಳಗಿನ ಹವೆಯು ಹಿಚಿಗೆ
ಘನವಾಗದ ಕಾರಣ ಮಿಂಚು ಸರಳವಾಗಿ ಗಮಿ
ಸುತ್ತದೆ?

ಬಾದಾಮಿ.

———ooo———

ಕೋಟೆಗಳು–ಈ ಗ್ರಾಮವು ಒಂದು ಎತ್ತರವಾದ ಬೈ
ಲಲ್ಲಿ ಇರುತ್ತದೆ. ಊರ ನಡುವೆ ಚೆಕ್ಕದೊಂದು ಬಾಲೇ ಕಿಲ್ಲೆ
ಯುಂಟು. ಅದಲ್ಲದೆ ಊರ ದಕ್ಷಿಣಕ್ಕೂ ಉತ್ತರಕ್ಕೂ ಒಂ
ದೊಂದು ಬಹು ಎತ್ತರವಾದ ಗಿರಿದುರ್ಗಗಳುಂಟು. ಊರ
ಹಿಂಬದಿಯ ಕೋಟೆಯು ತಕ್ಕ ಮಟ್ಟಿಗೆ ಭದ್ರವಾಗಿರುತ್ತದೆ.

ಊರ ಎಮರಿಗಿರುವ ಎರಡನೇ ಕೋಟೆಯು ಚನುತ್ತಾರವಾ
ದದ್ದುಂಟು. ಇದರ ಸುತ್ತು ಮುತ್ತು ಗುಡ್ಡವನ್ನು ಗೋಡೆಯ
ಹಾಗೆ ನೆಟ್ಟಗೆ ಕಡಿದಿದ್ದಾರೆ. ಎತ್ತರ ಸುಮಾರು೩೦೦ ಮೂಟು.
ಯಾವ ಕಡೆಯಲ್ಲಿಯೂ ಏನು ಸಂಬಂಧವಿಲ್ಲದೆ ಅಪ್ರಮಾ
ಣವಾದ ಕೊತ್ತಳದಂತೆ ಕಾಣಿಸುವ ಈ ಗುಡ್ಡವನು ಅಲ್ಲಲ್ಲಿ
ಗೆ ಶೀಳಿರುತ್ತಾರೆ. ಈ ಬಿರುಕುಗಳು ನಾಲ್ಕಾರು ಮೂಟು ಮಾ
ತ್ರ ಅಗಲುಂಟು; ಆದರೆ ೨೦೦ ರಿಂದ ೩೦೦ ಮೂಟುಗಳವರೆ
ಗೆ ಆಳವಾಗಿರುತ್ತವೆ. ಇಂಥಾ ಬಿರುಕುಗಳೊಳಗಿಂದಲೇ ಈ
ಕೋಟೆಯ ಮೇಲೆ ಹ್ರೋಗುವ ದಾರಿಯುಂಟು. ಈ ಕೋಟೆ
ಯಲ್ಲಿ ಈಗ ಯಾರು ಇರುವದಿಲ್ಲ.

ಬಸ್ತಿಗಳು-ಊರ ಹಿಂದಿನ ಗುಡ್ಡದೊಳಗೆ ಜೈನರಿಂದ
ಕೊರೆಯಲ್ಪಟ್ಟ ಚೈತ್ಯಾಲಯಗಳು ಬಹಳವುಂಟು. ಇವುಗಳ
ಲ್ಲಿ ೪ ನೋಡತಕ್ಕಂಥ ವಿರುತ್ತವೆ. ಅವುಗಳಿಗೆ ಮೇಣ ಬಸ್ತಿ
ಗಳೆನ್ನುವರು. ಇವುಗಳಿಗೆಲ್ಲ ಸವ ಮಾಳಿಗೆಯುಂಟು. ಆ
ಮಾಳಿಗೆಯ ಒಳಮೈಯಲ್ಲಿಯೂ ಕಂಬಗಳ ಮೇಲೆಯೂ
ರಮಣೀಯವಾದ ಚಿತ್ರಗಳು ಕೊರೆಯಲ್ಪಟ್ಟಿವೆ. ಈ ಬಸ್ತಿಗ
ಳಲ್ಲಿ ವಿಕ್ರಾಳ ಸ್ವರೂಪವುಳ್ಳ ಮೂರ್ತಿಗಳುಂಟು.

ನೀರಿನ ಹೊಂಡವು-ಇದು ಬಹಳ ದೊಡ್ಡದದೆ. ಮೂರು ದಿ
ಕ್ಕುಗಳಲ್ಲಿ ಗುಡ್ಡಗಳವೆ. ನಾಲ್ಕನೇ ಬದಿಗೆ ದೊಡ್ಡದೊಂದು
ಒಡ್ಡು ಹಾಕಿರುತ್ತಾರೆ. ಇದರೊಳಗಿನ ನೀರು ಎಂದೂ ಅ
ಟ್ಟಿಸುವದಿಲ್ಲ. ಕೋಪ್ಪರಾಯನೆಂಬ ಅರಸು ಸುಮಾರು ೬೦೦
ವರ್ಷಗಳಹಿಂದೆ ಈ ಗ್ರಾಮವನು ಕಟ್ಟಿದಾಗ ಈ ಹೊಂಡವ
ನ್ನು ಕಟ್ಟಿಸಿದನೆಂದು ಜನವಾರ್ತೆಯುಂಟು. ಹೊಂಡದಮೇಲೆ
ಚಿಕ್ಕದೊಂದು ಗುಡಿಯನು ಕಟ್ಟಿ ಆ ರಾಯನ ಮೂರ್ತಿಯ
ನ್ನು ಕೂಡ್ರಿಸಿರುತ್ತಾರೆ.

ಬನಶಂಕರಿಯು-ಈ ಊರಿನಿಂದ ಸುಮಾರು ೩ಮೈಲು ದೂರವಾಗಿ ಚೊಳಚಗುಡ್ಡವೆಂಬ ಹಳ್ಳಿಯ ಹತ್ತರ ಬನಶಂಕರಿಯ ಗುಡಿಯುಂಟು. ಇದು ಹಿಂದಿನ ಯುಗದಲ್ಲಿ ಆದದ್ದೆಂದು ಜನರು ಹೇಳುತ್ತಾರೆ. ಈ ಗುಡಿಯಲ್ಲಿ ಪದ್ಮತೀರ್ಥ, ಹರಿದ್ರಾತೀರ್ಥ, ತೈಲತೀರ್ಥ, ಯಮುನಾ ಸರಸ್ವತೀ ತ್ರಿವೇಣಿ ಸಂಗಮ ಎಂಬ ಸರೋವರಗಳಿಯಟು. ಹರಿದ್ರಾ ತೀರ್ಥದ ನೀರು ಎಂದೂ ಹೆಚ್ಚು ಕಡಿಮೆ ಯಾಗುವದಿಲ್ಲ. ತೈಲ ತೀರ್ಥದ ನೀರು ಎಣ್ಣೆಯಹಾಗಿರುತ್ತದೆ. ಸುಮಾರು ೩೦೦ ವರ್ಷಗಳ ಪೂರ್ವದಲಿ ಕಂಕರಕೆಟ್ಟ, ಜೋಳಕೆಟ್ಟ ಎಂಬ ಕಟ್ಟಗಳು ಈ ಗುಡಿಯನ್ನು ದುರಸು ಮಾಡಿಶಿದರೆಂದು ಜನರು ಹೇಳುತ್ತಾರೆ. ಈ ದೇವಾಲಯಕ್ಕೆ ಆನೀಗುಂದಿಯ ಅರಸರು ೩೨ ಗ್ರಾಮಗಳಂನು ಇನಾಮುಕೊಟ್ಟರು. ತರುವಾಯ ವಿಜಾಪುರದ ಬಾದಶಹನಿಂದ ಕೆಲವ್ರ ವರ್ಷಾಶನವ್ರ ಗೊತ್ತಾಯಿತು. ರುಸ್ತುಮ ಅಲ್ಲೀಖಾನನೆಂಬ ಮಾಮಲೇದಾರನ ಕಾಲ ಕೀರ್ತಿಯಲ್ಲಿ ಪರುಶುರಾಮ ನಾಯಿಕ ಅನಗೋಳಕರ ನೆಂಬುವನೊಬ್ಬ ವಗ್ಗಹಸ್ಥನು ಬಹಳ ಹಣವೆಚ್ಚ ಮಾಡಿಗುಡಿಯಂನು ನೆಟ್ಟಗೆಮಾಡಿಸಿ ದೇವಿಯ ಪ್ರಸನ್ನೂರ್ತಿಯಂನು ಸ್ಥಾಪಿಸಿದನೆಂದು ಕೇಳುತ್ತೇವೆ. ಪೇಶವೆಯವರ ಆಳಿಕೆಯಲ್ಲಿ ರಾಸ್ತೆ ಎಂಬ ಸರದಾರನು ರಥೋತ್ಸವವಂನು ಪ್ರಾರಂಭ ಮಾಡಿದನು. ಈ ಉತ್ಸವನ್ರ ಈಗ ಪಶುದ್ಧ ಪೂರ್ಣಿಮೆಯಲ್ಲಿ ಆಗುತ್ತದೆ. ಹತ್ತೆಂಟು ಸಾವಿರ ಜನರು ಕೂಡುತ್ತಾರೆ.

ಮಹಾ ಕೋಟೇಶ್ವರ-ಬಾದಾವಿಯ ಹತ್ತರ ನಂದಿಕೇಶ್ವರವೆಂಬಲ್ಲಿ ಈ ದೇವಾಲಯವ್ರ ಗುಡ್ಡದಲ್ಲಿ ಅದೆ. ಇದರ ಸುತ್ತಮುತಲಿರುವ ನಿಬಿಡವಾದ ವೃಕ್ಷಗಳಿಂದಲೂ, ಮುಂಭಾಗದಲ್ಲಿ ಹೊಳೆಯುವ ಎರಡು ಅಚ್ಛೋದಕ ಸರೋವರಗಳಿಂದ

ಲೂ. ಈ ದೇವಾಲಯವು ಅತಿ ರಮಣೀಯವಾಗಿ ತೋರುತ್ತದೆ. ಇದನ್ನು ಕಟ್ಟಿ ಸುವಿರಾರುವರ್ಷಗಳಾಗಿರಬಹುದು. ಸುತ್ತು ಮುತ್ತು ಗುಡ್ಡದೊಳಗೆಲ್ಲ ಚಿಕ್ಕ ದೊಡ್ಡ ಶಿವಾಲಯಗಳು ಅಸಂಖ್ಯ ಉಂಟು. ಅವೆಲ್ಲ ಜೀರ್ಣವಾಗಿರುತ್ತವೆ.

ಶಿಲಾ ಲಿಪಿಗಳು-ಬನಶಂಕರಿಯ ಹತ್ತರ ಚಿಕ್ಕೊಳಚ ಗುಡ್ಡದ ಸೀಮೆಯಲ್ಲಿ ಇ, ಬಾದಾವಿಯಲ್ಲಿ ದತ್ತಾತ್ರಯನ ಗುಡಿಯ ಎದುರಿಗೆ ಇ, ಯಲ್ಲಮ್ಮನ ಗುಡಿಯ ಎದುರಿಗೆ ಇ, ಮಹಾಕೂಟೇಶ್ವರನ ಗುಡಿಯ ಹತ್ತರ ಇ, ಬಾದಾವಿಯಲ್ಲಿ ಶಿವಾಲಯ ದೆದುರಿಗೆ ೨, ಗುಡ್ಡದೊಳಗೆ ಸೂರ್ಯ ತೀರ್ಥ ಅರಳೀ ತೀರ್ಥಗಳ ಹತ್ತರ ೨, ಮೇಣಬಸ್ತಿಯಲ್ಲಿ ೪, ಕೋಟೆಯಲ್ಲಿ ೩, ಮೂರು ಮಸೀದಿಗಳ ಮೇಲೆ ಕೂಡಿ ೧೩, ಈ ಪ್ರಕಾರ ಶಿಲಾಲೇಖಗಳಿರುತ್ತವೆ. ಇಷ್ಟು ಲಿಪಿಗಳಿರುವದರಿಂದಲೇ ಈ ಸ್ಥಳವು ಬಹು ಪ್ರಾಚೀನ ಕಾಲದಿಂದ ಹೆಸರಾದದ್ದೆಂದು ತೋರುತ್ತದೆ. ಇವಲ್ಲದೆ ಗುಡ್ಡದಲ್ಲಿ ಸಣ್ಣ ಸಣ್ಣ ಲೇಖಗಳು ಬಹಳ ವುಂಟು.

ಖನಿಜಗಳು-ಬಾದಾವಿಯ ನೆರೆ ಗುಡ್ಡದಲ್ಲಿ ಬೀಸೂಕಲ್ಲುಗಳೂ ಸಾಣೇಕಲ್ಲುಗಳೂ ಬಹಳ ದೊರೆಯುತ್ತವೆ. ಈ ಪ್ರಾಂತದಲ್ಲಿ ಮಾರಾಟಕ್ಕೆ ಬರುವ ಬೀಸೂಕಲ್ಲುಗಳೂ ಸಾಣೇಕಲ್ಲುಗಳೂ ಎಲ್ಲ ಅಲ್ಲಿಂದಲೇ ಬರುತ್ತವೆ.

ಇತಿಹಾಸವು-ಎಲ್ಲಕ್ಕೂ ಮೊದಲನೇ ಅರಸು ಕೋಪ್ಪರಾಯನಂತೆ. ಅವನೇ ಈ ಊರು ಕಟ್ಟಿಸಿದನೆಂದು ಹೇಳುತ್ತಾರೆ. ಅವನ ತರುವಾಯ ಆನೇಗುಂದಿಯ ನರಪತಿಗಳೆಂಬ ಅರಸರ ಆಳಿಕೆಗೆ ಈ ಗ್ರಾಮ ಸೇರಿತು. ಅವರ ನಂತರ ವಿಜಾಪ್ರರದವರು. ನಬಾಬು *ಬಹಾದೂರನು, ಪೇಶವೆಗಳು, ಪ್ರನಃ ನಬಾಬು

*ನಬಾಬು ಬಹಾದೂರನೆಂದರೆ ಹೈದರಅಲ್ಲಿ ಎಂದು ತೋರುತ್ತದೆ

ಬಹಾದೂರನು, ಕ್ರಮವಾಗಿ ಆಳಿದ ಬಳಿಕ ಬಾದಾವಿಯು
ನ್ನು ೧೯೯೬ ನೇ ಫಸಲಿಯಲ್ಲಿ ಮತ್ತೂ ಪೇಶವೆಯವರ
ಪ್ಯಕ್ಕೆ ಶೇರಿತು. ತರುವಾಯ ಸನ್ನು ೧೧೧೯ ನೇ ಇಸವಿ
ಲ್ಲಿ ಇಂಗ್ಲಿಷ ಸರಕಾರದ ಅಮಲು ನೇಲೆಗೊಂಡಬಳಿಕ, ಸನ್ನು
೧೧೪೧ ನೇ ಇಸವಿಯಲ್ಲಿ ಅರಬರು ಈ ಕೋಟೆಯನ್ನು
ದಾಳಿಯು ಮಾಡಿದರು. ಅವರನ್ನು ಗೆದ್ದು ಇಂಗ್ಲಿಷ ಸರಕಾ
ದವರು ತಿರುಗಿ ಈ ಕೋಟೆಯನ್ನು ತಕ್ಕೊಂಡಂದಿನಿಂದ ಆವ
ಆಳಿಕೆಗೇ ಶೇರಿರುತ್ತದ.

CORRESPONDENCE.
ಪತ್ರವ್ಯವಹಾರವು

ಬೇಡಕೀಹಾಳ ಶಾಲೆಯ ಶಿಷ್ಯಕರು ಕಳುಹಿದ ಲಿಖಿವು.
(ಕಳಿದ ನಂವಂಬರಿನ ಶಾ. ಪ. ಪು. ೪೧೦ ನೋಡು).

ಒಂದು ಗ್ರಾಮದಲ್ಲಿ ಏಳು ಕೋಟೆಗಳಿದ್ದವು ಆ ಕೋಟೆ
ಗಳ ರಕ್ಷಣಾಕ್ಕೆ ಏಸಿಕೆ ಜನರು ದರಬಂದು ಕೋಟೆಗಳಲ್ಲಿ
ದ್ದರು. ಆದರೆ ಮೊದನೇ ಕೋಟಿಗೆ ಪರರಾಯರ ಸೈನ್ಯ
ಬಂದು ಮುತ್ತಿಗೆ ಹಾಕಲು, ಆ ಕೋಟೆಯ ಅಧಿಕಾರಸ್ಥನು
ಉಳಿದ ಆರು ಕೋಟೆಗಳ ಮುಖ್ಯಸ್ಥರಿಗೆ ಬೇಡಿಕೊಂಡದ್ದೇ
ನಂದರೆ, ನನ್ನಲ್ಲಿ ಇದ್ದವ್ವು ದಂಡನ್ನು ನೀವೆಲ್ಲರು ಪ್ರಥ
ಕ್ ಪ್ರಥಕ ಕೊಟ್ಟರೆ, ಆವರನ್ನು ಓಡಿಸುತ್ತೇನೆ. ಅವರು ಅ
ವನ ಕೋರಿಕೇಮೇರಿಗೆ ದಂಡು ಕೊಡಲಾಗಿ ಎದುರಾಳಿಗಳ
ನ್ನು ಹಿಂಮ್ಮೆಟ್ಟಿಸಿದನು. ಅನಂತರ ಎರಡನೇ ಕೋಟೆಗೆ ಕ
ಪ್ರುಗಳು ಮುತ್ತಿಗೆ ಹಾಕಲು ಆತನು ತನ್ನಲ್ಲಿ ಇದ್ದವ್ವು, ದಂ
ಡನ್ನು ನೀವೆಲ್ಲರು ಪ್ರತ್ಯೇಕ ಪ್ರತ್ಯೇಕವಾಗಿ ಕೊಡಬೇಕೆಂ

ದು ಬೇಡಿಕೊಂಡನು, ಇದೇ ಪ್ರಕಾರವಾಗಿ ಏಳು ಕೋಟೆಗಳಿಗೆ ಮುತ್ತಿಗೆ ಹಾಕಿ, ಶತ್ರುಗಳು ಅಪಜಯವಾಗಿ ಪಲಾಯನವಾದರು. ಕಡೆಯಲ್ಲಿ ಎಲ್ಲಾ ಕೋಟೆಗಳಲ್ಲಿ ಸಮವಾಗಿ ಜನರಿದ್ದರು. ಆದರೆ ಮೊದಲಿಗೆ ದರಬಂದು ಕೋಟೆಯಲ್ಲಿ ಎಷ್ಟು ಜನರು ಇದ್ದರು.

ರೀತಿ

ಕೋಟೆಗಳ ಸಂಖ್ಯಕ್ಕೆ ಅದರಷ್ಟೇ ಘಾತ ಮಾಡಬೇಕು. ಬಂದ ಘಾತಕ್ಕೆ ಕೋಟೆಗಳ ಸಂಖ್ಯದಿಂದ ಭಾಗಿಸಬೇಕು. ಬಂದ ಭಾಗಾಕಾರವನ್ನು ಘಾತದಲ್ಲಿ ಮಿಶ್ರಿತ ಮಾಡಬೇಕು ಈ ಪ್ರಕಾರವಾಗಿ ಎಷ್ಟು ಕೋಟೆಗಳು ಇರುವವೋ ಅಷ್ಟರತನಕಾ ಭಾಗಿಸಬೇಕು ಬಂದ ಭಾಗವನ್ನು ಹ್ರಸಹ್ರಸ ಮಿಶ್ರಘಾತಗಳಲ್ಲಿ ಮಿಶ್ರಮಾಡುತ್ತಾ ಭಾಗಿಸುತ್ತಾ ಹ್ರೋದರೆ ಆ ಖ್ಯೆರಕ್ಕೆ ಬಂದ ಭಾಗವೇ ಮೊದಲನೇ ಕೋಟೆಯ ಜನರ ಎಣಿಕೆ ಆಗುವದು.

೭×೭=೪೯×೭=೩೪೩×೭=೨೪೦೧×೭=
೧೬೮೦೭×೭=೧೧೭೬೪೯×೭=೮೨೩೫೪೩

೭)೮೨೩೫೪೩(೧೧೭೬೪೯ ೭೬೭೩೪೩=ಮೊದಲನೇ ಕೋಟೆಯ ಜನರು.
೭
೧೭೬೪೯
೧೪
೩೫೪೩
೩೫
೪೩೭೦=೮. ”
೪೨
೧೦೭೦೪
೭
೪೯೭೦=೫. ”
೪೯
೧೭೬೪೯
೧೭೬೪೯=೫೫. ”
೧೬೮೦೭
೧೪೭೬೪
೧೬೮೦೭
೧೬೮೦೭=೦. ”
೧೪೭೬೪೭
೧೪೭೬೪
೩೪೩
೩೪೩=೦. ”
೨೪೦೧
೨೪೦೧=೦. ”
೭)೨೪೦೧(೩೪೩
೨೧
೩೦
೨೮
೨೧
೯
೭
೨)೭(೩
೬
೧
೦
೧=೧. ”

೭೭೫೬೫೬

೭)೬೪೦೪೯೯೭(೭೦೦೭೦೪

೬೩೦೦೭೦೪

೭)೬೬೦೫೬೭೫(೭೪೯೭೫೬

೭೪೯೭೫೬

೭)೬೪೫೫೫೦೦೪(೭೬೭೬೪೪೪

೭೬೭೬೪೪೪

೭೭೭೫೬೫೬೪೯೬೪೯೬೪೯

ಶಾಲಾಪತ್ರಕವ್ಯ.

ಪುಸ್ತಕ ೩೨] [ಸಂಚಿಕೆ ೧೨

ಕಾರೀಖು, ೨೫ನೇ ಮಾಹೆ ಫೆಬ್ರುವಾರಿ, ೧೮೭೨.

EDUCATIONAL INTELLIGENCE.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು.

ದಿಲ್ಲೀ ಪಟ್ಟಣದಲ್ಲಿ ಒಂದು ಸರಕಾರೀ ಕಾಲೇಜಿವಿರುತ್ತದೆ. ಅದನ್ನು ಬರುವ ಎಬ್ರುಲ ತಿಂಗಳಿನ ೧ನೇ ತಾರೀಖಿನಿಂದ ಕಟ್ಟು ಮಾಡುವ ಆಲೋಚನೆಯು ಸರಕಾರದವರಿಂದ ಮಾಡಲ್ಪಟ್ಟಿದೆ. ಈ ಪಟ್ಟಣದ ಮುಸಲ್ಮಾನ ಜಾತಿಯ ನಿವಾಸಿಗಳು ಈ ಕಾಲೇಜನ್ನು ಸನ್ನ ೧೮೬೪ನೇ ವರ್ಷ ದಂತಿಗವಿುಂದ ಹಣ ಕೂಡಿಸಿ ಸ್ಥಾಪಿಸಿದರು. ಮುಂದೆ ಸನ್ನ ೧೮೬೬ನೇ ವರ್ಷ ನಬಾಬ ಇತವುತ ಉದವಲ್ಲಾ ಎಂಬವರು ಈ ಕಾಲೇಜಕ್ಕೆ ೩೦೦೦೦ ರೂಪಾಯಿ ಇನಾವು ಕೊಟ್ಟರು. ಅಂದಿನಿಂದ ಈ ವಿದ್ಯಾಲಯವು ಬಹು ಸರಳವಾಗಿ ನಡೆದು, ಕಡೆಯಲ್ಲಿ ಇದರ ವ್ಯೆವಸ್ಥಾವಕರು ಸನ್ನ ೧೮೭೫ನೇ ವರ್ಷ ಇದನ್ನು ಸರಕಾರಕ್ಕೆ ಒಪ್ಪಿಸಿದರು. ಈ ಬಗೆಯಾಗಿ ಆ ಪಟ್ಟಣದ ನಿವಾಸಿಗಳು ೬೪ ವರ್ಷ ತನ್ನ ಸ್ವಾಂತ ವೆಚ್ಚದಿಂದ ಬ

ಪ್ರೀತಿಯಿಂದ ನಡೆಸಿದಂಥಾ ವಿದ್ಯಾಲಯವನ್ನು ಸರಕಾರದವರು ತಮ್ಮ ಕೈಯಲ್ಲಿ ಬಂದು ೨೦ ವರ್ಷಗಳಾಗುವ ಪೂರ್ವದಲ್ಲಿ ಮುರಿಯುವ ಆಲೋಚನೆಯನ್ನು ಮಾಡಿದ್ದಾರೆ. ಮುರಿಯುವ ಕಾರಣವೇನಂದರೆ, ಲಾಹೋರ ಪಟ್ಟಣದಲ್ಲಿ ಪ್ರೊಸಬೊಂದು ಸರಕಾರೀ ಕಾಲೇಜವು ಸ್ಥಾಪಿತವಾಗಿ ಅದಕ್ಕೆ ಯುನಿವರ್ಸಿಟಿಯು ಅಧಿಕಾರವು ಕೊಡಲ್ಪಟ್ಟಿದೆ. ಆ ಕಾರಣ ಒಂದೇ (ಪಂಜಾಬ) ಆಲಾಖೆಯಲ್ಲಿ ಎರಡು ದೊಡ್ಡ ಕಾಲೇಜುಗಳ ವೆಚ್ಚವು ಸರಕಾರಕ್ಕೆ ದುಃಸಹವಾಗಿರುತ್ತೆಂದಂತ್ರೆ.

ಪಂಜಾಬದ ಯುನಿವರ್ಸಿಟಿಯಲ್ಲಿ ಝಿಂದ, ಪೆಹೆಲ್ವಿ ಇವೆರಡು ಭಾಷೆಗಳ ಅಭ್ಯಾಸವನ್ನು ನಡಿಸುವ ಆಲೋಚನೆಯುಂಟು. ಝಿಂದ (ಝಂದ) ನಮ್ಮ ಋಗ್ವೇದದ ಭಾಷೆಯೂ ಬಹುತರವಾಗಿ ಒಂದೇ. ಅಂದರೆ ಇವೆರಡೂ ಸಂಸ್ಕೃತದ ಮೂಲ ಸ್ವರೂಪವನ್ನು ತೋರಿಸುತ್ತವೆ. ಪಾರ್ಸೀ ಜನರ ಅವೆಸ್ತಾಯೆಂಬ ಪ್ರಾಚೀನ ಧರ್ಮ ಪುಸ್ತಕವು ಝಿಂದ ಭಾಷೆಯಲ್ಲಿಯೇ ಬರೆಯಲ್ಪಟ್ಟಿದ್ದುಂಟು. ಋಗ್ವೇದದ ಭಾಷೆಯು ನಮ್ಮ ದೇಶದಲ್ಲಿ ನಡೆಯುತ್ತಿದ್ದಾಗ ಝಿಂದಭಾಷೆಯು ಅರಾಣ ದೇಶದಲ್ಲಿ ನಡೆಯುತ್ತಿತ್ತು. ಪೆಹೆಲ್ವೀ ಭಾಷೆಯಾದರೂ ಅದೇ ದೇಶದಲ್ಲಿ ಎಷ್ಟೋ ಶತಮಾನಗಳ ಹಿಂದೆ ನಡೆಯುತ್ತಿತ್ತು. ಇದು ಸಂಸ್ಕೃತದಿಂದ ಹುಟ್ಟಿದ ಭಾಷೆಯು.

ಖಾನದೇಶ ಜಿಲೆಯ ಮುಖ್ಯ ಗ್ರಾಮವಾದ ಧುಳೇ

ಯಲ್ಲಿ ಇದ್ದ ಟ್ರೇನಿಂಗ ಕಾಲೇಜವನ್ನು, ಬೋರ್ಡಿಂಗ ಹೌಸಿಂದರೆ ವಿದ್ಯಾರ್ಥಿಗಳ ಊಟದ ಶಾಲೆಯನ್ನೂ ಕಟ್ಟು ಮಾಡುವಬಗ್ಗೆ ಸರಕಾರೀ ತರಾವು ಪ್ರಕಟವಾಗಿದೆ.

ಶ್ರೇಷ್ಠ ವರ್ಗದ ಯುರೋಪಿಯನ್ ಅಧಿಕಾರಿಗಳ ಹೆಣ್ಣು ಮಕ್ಕಳಸಲುವಾಗಿ ಸಿಮ್ಲಾ (ಹಿಮಾಲಯದಲ್ಲಿ) ಎಂಬಲ್ಲಿ ಹ್ರೊಸದೊಂದು ಕಾಲೇಜವು ಸ್ಥಾಪಿತವಾಗತಕ್ಕದ್ದದೆ. ಅದರ ಸಲುವಾಗಿ ಕಳದ ಜನವರಿಯ ೧ ನೇ ತಾರೀಖಿನಲ್ಲಿ ದಿಲ್ಲಿಯ ದರ್ಬಾರಿನಲ್ಲಿ ಕೂಡಿದ ಅರಸರುಗಳ ಕಡೆಯಿಂದ ೫ ಲಕ್ಷ ರೂಪಾಯಿಗಳನ್ನು ಕೂಡಿಸಿದ್ದಾರೆ.

ನಮ್ಮ ದೇಶದವರ ಹಿತಕ್ಕೋಸ್ಕರವಾಗಿ ವಿಲಾಯತಿಯಲ್ಲಿ ಸ್ಥಾಪಿಸಲ್ಪಡಬೇಕಾಗಿದ್ದದ್ದೊಂದು ಸಮಾಜದ ಸಲುವಾಗಿ ಪ್ರೊಫೆಸರ ವುಯಿಲಿಯಮ್ಸ್ ಎಂಬವರಿಗೆ ತ್ರಾವಣಕೋರದ ಅರಸರು ೫೦೦೦೦ ರೂಪಾಯಿ ಕೊಟ್ಟಿರೆಂದು ಕೇಳುತ್ತೇವೆ.

ಈ ಸ್ಪರ್ಧದಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳೆಲ್ಲರು ಮುಂಬಯಿಗೆ ಹೋಗಿ, ಅಲ್ಲಿಯೇ ಮೊದಲಿನಿಂದ ಕಡೆತನಕ ಪರೀಕ್ಷೆಯನ್ನು ಕೊಡಬೇಕಾಗುತ್ತಿತ್ತು; ಮತ್ತು ಮೊದಲಿನ ಇಂಗ್ಲಿಷ ಭಾಷೆಯ ಸಂಬಂಧದ ಪ್ರಶ್ನೆಗಳಲ್ಲಿ ನಾವು ಸಲದವರು ಮುಂದೆ ಪರೀಕ್ಷೆಗೆ ಕೂಡ್ರದೆ ಸುಮ್ಮನೆ ಹಿಂದಿರುಗಿ ಬರಬೇಕಾಗುಗುತ್ತಿತ್ತು. ಆದರೆ ಒಳಗಡೆಯಲ್ಲಿ ಯುನಿವರ್ಸ

ಟಿಯ ಅಧಿಕಾರಿಗಳು ನೂಡಿದ ಪ್ರೂಸದೊಂದು ನಿಯಮ ವೇನೆಂದರೆ, ಇನ್ನು ಮುಂಬೆ ಮೂರೂ ಭಾಗಗಳಲ್ಲಿ ಒಂ ದೊಂದು ಮುಖ್ಯ ಸ್ಥಲವನ್ನು ಗೊತ್ತುಮಾಡಿ, ಆ ಮೂ ರು ಸ್ಥಳಗಳಲ್ಲಿ ಸದರೀ ಪ್ರಶ್ನೆಗಳಲ್ಲಿ ವಿದ್ಯಾಗಳನ್ನು ಪರೀಕ್ಷಿಸಲಾಗಿ, ಅಪ್ಪಗಳಲ್ಲಿ ಬಾಸ್ ಆದವರು ಮಾತ್ರ ಉಳಿದ ಪರೀಕ್ಷೆಯನ್ನು ಮುಂಬಯಿಗೆ ಹೋಗಬೇ ಕು, ಪಾಸಾಗದವರು ಹೋಗುವ ಪ್ರಯೋಜನವಿಲ್ಲ. ಇದ ರಿಂದ ಬಹುಜನ ವಿದ್ಯಾರ್ಥಿಗಳಿಗೆ ಸಿಕ್ಷಣಕ್ರಮವಾಗಿ ಆಗುತ್ತ ಲಿದ್ದ ಶ್ರಮವೂ ಖರ್ಚೂ ಉಳಿಯುವದು.

ರಾ. ರಾ. ವೆಂಕಟೆ ರಂಗೋ ಕಟ್ಟೆ ಇವರು ತಮ್ಮ ತಾ ಲ್ಲೂಲೇಟಿನ ಆಫೀಸಿನ ಬಾಜಿಗಾವನ್ನು ಪ್ರೋದ ತಿಂಗಳಿನ ೩೧ ನೇ ತಾರೀಖಿನಲ್ಲಿ ತಕೊಂಡಿದರಿಂದ, ಅವರ ಸ್ಥಳ ದಲ್ಲಿ ಮೊದಲು ಕೆಲಸ ಮಾಡುತ್ತಿದ್ದ ರಾ. ರಾ. ಪಾಂಡು ರಂಗ ವೆಂಕಟೇಶ ಜಿಂತಾಮಣಿ ಪೇಷಕರ ಇವರು ಮೆ. ರಸೆ ಲ್ ಫೊರೆಗಳು ತೆಗುಗಿ ಬರುವ ವರೆಗೆ ರಾ. ರಾ. ಚನಬ ಸಪ್ಪನವರ ಸ್ಥಳದಲ್ಲಿ ಭಾರವಾಡಕಿಚ್ಚಿಯು ಡಿ. ಇ. ಕೆಲ ಸಕ್ಕೆ ಅಕ್ಟಿಂಗ ಪ್ರಕಾರ ನೇಮಿಸಲ್ಪಟ್ಟಿದ್ದಾರೆ. ರಸೆಲ್ ಫೊರೆಗಳು ಬಂದ ಬಳಿಕ ಚನಬಸಪ್ಪನವರು ತಮ್ಮ ಭಾ ರವಾಡದ ಸ್ಥಳಕ್ಕೆ ಹೋಗಿ, ಪಾಂಡುರಂಗ ರಾಯರು ತ ಮ್ಮ ಬೆಳಗಾವಿಯ ಸ್ಥಳಕ್ಕೆ ಹೋಗುವರೆಂದು ತೋರುತ್ತ ದೆ. ಆದರೆ ಇನ್ನೂ ಕೆಲವು ದೊಡ್ಡ ದೊಡ್ಡ ಹೆಚ್ಚು ಕ ಡಿಮೆಗಳಾಗತಕ್ಕವಿರುತ್ತವೆಂದು ಕೇಳುತ್ತೇವೆ.

ಕಾಶೇನಾಡ ಪ್ರಾಂತದೊಳಗೆ ರಾಜಕೋಟವೆಂಬಲ್ಲಿ ಒಂದು ಪ್ರದರ್ಶನವು ಆಗತಕ್ಕದ್ದದೆ. ಆ ಪ್ರದರ್ಶನದಲ್ಲಿ ಮೇಲಾದ ಕಸೂತಿಯುಳ್ಳಾದಲ್ಲಿಯುವ ಕೈಗಾರಿಕೆಯುಳ್ಳ ಈ ದೇಶದ ದೇಂಗಸರಿಗೆ ಅನಾನು ಕೊಡುವದಕ್ಕೋಸ್ಕರವಾಗಿ ಮೊದಲೀ ಸಂಸ್ಥಾನದ ರಾಜಕನ್ಯೆಯೊಬ್ಬಳು ೪೦೦ ರೂಪಾಯಿಗಳನ್ನು ಕೊಟ್ಟಿದ್ದಾಳೆ.

ಪಾರೀಸ ಪಟ್ಟಣದಲ್ಲಿ ಒಬ್ಬ ಜೇನೆಯವನ ಮೈಯಲ್ಲಿ ರಕ್ತವು ಬಹು ಸ್ವಲ್ಪ ಅದ್ದರಿಂದ ಬಹಳ ದುರ್ಬಲನಾಗಿದ್ದನು. ಆ ಕಾರಣ ಡಾಕ್ತರನು ಒಂದು ಕುರಿಯನ್ನು ತಂದು, ಅದರ ಮೈಯೊಳಗಿನ ರಕ್ತವನ್ನು ಆ ಜೇನೆಯವನ ಮೈಯೊಳಗೆ ಯಂತ್ರದಿಂದ ತುಂಬಿಸನು. ಅದರಿಂದಲಾ ಜೇನೆಯವನ ಮೈಯಲ್ಲಿ ತಕ್ಕ ಮಟ್ಟಿಗೆ ಸಾಮರ್ಥ್ಯವುಂಟಾಯಿತು. ಆದರೆ ಅವನು ಕುರಿಯಾಗಿ ಬದಲು ತೋಡಗಿದನು; ಮತ್ತು ಕಟಿಕರ ಅಂಗಡಿಯನ್ನು ನೋಡಿದ ಕೂಡಲೆ ಅವನು ಸ್ಮೃತಿಗೆಡುವನಂತೆ.

ಪರಭಾಷೆಯ ಅಭ್ಯಾಸವು.

ಯಾವದೊಂದು ಭಾಷೆಯ ಅಭ್ಯಾಸದಲ್ಲಿ ಎರಡು ಉದ್ದೇಶಗಳಿರುತ್ತವೆ; ಆ ಭಾಷೆಯಲ್ಲಿ ಯಾರಾದರೂ ಮಾತಾಡಿದರೆ ಇಲ್ಲವೆ ಬರೆದರೆ ಅದನ್ನು ತಿಳಿದು ಕೊಳ್ಳುವದು ಮೊದಲು, ಅದರಲ್ಲಿ ನಾವು ಸ್ವತಃ ಮಾತಾಡಲಿಕ್ಕೆ ಬರೆಯಲಿಕ್ಕೆ ಸಮರ್ಥರಾಗಬೇಕೆಂಬುವದು ಮತ್ತೊಂ

ಹು. ಆ ಭಾಷೆಯ ಶಬ್ದಗಳನ್ನು ಕೇಳಿದ ಕೂಡಲೆ ಅವುಗಳ ಭಾವವು (ಅರ್ಥವು) ನಮ್ಮ ಮನಸ್ಸಿನಲ್ಲಿ ಸೇರಬೇಕೆಂತಲೂ, ಯಾವುದೊಂದು ಭಾವವನ್ನು ವ್ಯಕ್ತ ಪಡಿಸಲು ಬೇಕೆಸಿದಕೂಡಲೆ ಅದಕ್ಕೆ ತಕ್ಕಂಥ ಆ ಭಾಷೆಯ ಶಬ್ದಗಳು ನಮಗೆ ನೆನಪಾಗಬೇಕೆಂತಲೂ ನಾವು ಕೋರುತ್ತೇವೆ. ಇದು ವ್ಯಾಕರಣಕ್ಕೆ ಎಷ್ಟು ಮಾತ್ರವೂ ಸಂಬಂಧವಾದದ್ದಲ್ಲ. ವ್ಯಾಕರಣವೆಂದರೆ ಭಾಷೆಯ ನಿಯಮಗಳ ಸಂಗ್ರಹವು. ಅಪರಲ್ಲಿ ಭಾಷಾಭಿಜ್ಞರ ಸಿದ್ಧಾಂತಗಳು ನಮಗೆ ತಿಳಿಯುತ್ತವೆ. ನಾವು ಕಲಸ್ತೊಂದು ಭಾಷೆಯನ್ನು ಕಲಿತುಕೊಂಡ ಬಳಿಕ ಆ ಭಾಷೆಯಲ್ಲಿ ಕುದ್ಧವಾಗಿ ಮಾತ್ರಾಡಲಿಕ್ಕೂ ಬರೆಯಲಿಕ್ಕೂ ವ್ಯಾಕರಣವು ತಕ್ಕ ಸಾಧನವಾಗುತ್ತದೆಂದು ನಿಷ್ಣಾಂಸರು ನಿರ್ಣಯಿಸಿದ್ದಾರೆ. ಇದರಿಂದ ನಾವು ಅರಿಯದಂಥ ಭಾಷೆಯನ್ನು ವ್ಯಾಕರಣವು ಕಲಿಸುತ್ತದೆಂದು ಸಿದ್ಧವಾಗುವದಿಲ್ಲ; ಮತ್ತೂ ಭಾಷೆಯನ್ನು ಕಲಿಯಲಿಕ್ಕೆ ವ್ಯಾಕರಣವು ಆವಶ್ಯಕವಾದ ಸಾಧನವೆಂತಲೂ ಯಾರೂ ಹೇಳಲಾರರು. ಹುಡುಗರು ಮತ್ತೊಬ್ಬರಾಡುವ ಮಾತುಗಳನ್ನು ಕೇಳಿ ಕೇಳಿ ಅವರ ಭಾಷೆಯನ್ನು ವ್ಯಾಕರಣಕ್ಕನುಸಾರವಾಗಿ ಸಾಂಪ್ರದಾಯ ಪೂರ್ವಕವಾಗಿಯೂ ಆಡಲಿಕ್ಕೆ ಕಲಿಯುತ್ತಾರೆ. ಎಷ್ಟೋ ಜನರು ವ್ಯಾಕರಣದ ಗಂಧವನ್ನು ಸಹ ಅರಿಯದಿದ್ದಾಗ್ಯೂ ತಮ್ಮ ಜನ್ಮ ಭಾಷೆಯನ್ನು ಕುದ್ಧವಾಗಿ ಆಡಲಿಕ್ಕೂ ಬರೆಯಲಿಕ್ಕೂ ತಪ್ಪುವದಿಲ್ಲ. ವ್ಯಾಕರಣದ ಸಾಧಾರಣ ನಿಯಮಗಳನ್ನು ಕಲಿಯಬಯಸುವವರು ಆ ನಿಯಮಗಳ ಅಪವಾದಗಳನ್ನು, ಪ್ರತ್ಯಪವಾದಗಳನ್ನು ಸಹ ಕಲಿಯಲಿಕ್ಕೆ ಬೇ

ಕು. ಯಾಕಂದರೆ ಈ ಅಪವಾದ ಪ್ರತ್ಯಪವಾದಗಳಿಗೆ ಒಳಗಾಗುವಂಥ ಶಬ್ದಗಳು ಎಲ್ಲ ಭಾಷೆಗಳಲ್ಲಿ ಹೆಚ್ಚಿಗೆ ರೂಢವಾಗಿರುತ್ತವೆ. ಆ ಕಾರಣ ಅವುಗಳ ನಿಯಮಗಳು ಹೆಚ್ಚಿಗೆ ಚನ್ನಾಗಿ ತಿಳಿಯಲಿಕ್ಕೆ ಬೇಕು. ಆದದರಿಂದ ಈ ಬಗೆಯ ತೊಂದರೆಯ ನಿಯಮಗಳನ್ನು ಕಲಿಯುವ ಗೊಂದಲದಲ್ಲಿ ಭಾಷೆಯ ಅಭ್ಯಾಸವು ಕುಂಠಿತವಾಗುವದು; ಅಥವಾ ವ್ಯಾಕರಣದ ಡಂಬರದ ಅಂಜಿಕೆಯಿಂದ ಕಲಿಯುವವನ ಹವಣಿಕೆಯೇ ಹಿಂಮೆಟ್ಟಿ ಬಿಡ್ತದು.

ಬಹು ಜನರು ತಾವು ಕಲಿಯಬೇಕಾಗಿದ್ದ ಭಾಷೆಯ ಮರ್ಮಗಳನ್ನು ಬೇಗ ಅರಿತು ಕೊಳ್ಳುವ ಸಂಭ್ರಮದಿಂದ ಆರಂಭದಲ್ಲಿ ವ್ಯಾಕರಣವನ್ನೇ ಕೈಕೊಳ್ಳುತ್ತಾರೆ. ಆದರೆ ಅಂಥವರಿಗೆ ತಮ್ಮ ಅಭ್ಯಾಸವು ಎಂದಿಗೂ ಮುಗಿಯಲಾರದೆಂಬ ಮಾತು ಬೇಗ ಮನದಟ್ಟಾಗುತ್ತದೆ. ನಿಯಮದ ಹಿಂದೆ ನಿಯಮವನ್ನು, ಅಧ್ಯಾಯದ ಹಿಂದೆ ಅಧ್ಯಾಯವನ್ನು ತಿರುತಿರುವಿ ಹಾಕುತ್ತ ಶಿಕ್ಷಕನೂ ವಿದ್ಯಾರ್ಥಿಯೂ ಬೇಸತ್ತು, ಬಾಯಾರಿ, ಬಳಲಿ, ತಲೆದಿರುಗಿ, ಕಟ್ಟಕಡೆಗೆ ಕೈಯಲ್ಲಿ ತಕ್ಕೊಂಡ ಪುಸ್ತಕವನ್ನು ಅಂತೂ ಇಂತೂ ಎಳವು ಚಲ್ಲಿದ ಬಳಿಕ ತಾವು ಭಾಷೆಯನ್ನು ಎಷ್ಟು ಮಟ್ಟಿಗೆ ಕಲಿತರೆಂದು ನೋಡುವಷ್ಟರಲ್ಲಿ, ಇನ್ನೂ "ಶ್ರೀರಂಗಶಯನವು" ಎಂಬ ಮಂಗಲಾಚರಣವನ್ನು ಸಹ ದಾಟಿಲ್ಲವೆಂದರಿತು, ಅವರು ನಿಟ್ಟುಸುರನಿಡುವರು. ವ್ಯಾಕರಣದ ಆರಂಭದಲ್ಲಿ ನಾಮಪದಗಳ ವಿಭಕ್ತಿ ರೂಪಗಳೆಲ್ಲ ಬರೆದಿರುತ್ತವೆ. ಅವುಗಳನ್ನೆಲ್ಲ ಕಲಿತು, ಒಂದು ವರ್ಗದ ಶಬ್ದಗಳನ್ನಂತು ಪಾರಾದೆವೆಂದು ನಾವು ಸಂ

ತೋಷ ಪಡುತ್ತೇವೆ. ಆದರೆ ಅವೆಲ್ಲ ಗುಡ್ಡಕ್ಕೆ ಕಲ್ಲು
ಪ್ರೊತ್ಸಾಹಾರ್ಥ. ಯಾಕಂದರೆ, ವ್ಯಾಕರಣವನ್ನು ಸಮಗ್ರ
ವಾಗಿ ಮುಗಿಸಿದ ಪ್ರೌಢ, ಒಂದು ಬಿಟ್ಟು ಸಾವಿರ ಸಾವಿ
ರ ನಾಮಗಳ ವಿಭಕ್ತಿ ರೂಪಗಳನ್ನು ಕಲಿತಾಗ್ಯೂ, ಅವ
ಲ್ಲಿ ನಿಳಿಗೆ ಮಾತು ಕಲಿಸಿದ ಹಾಗೇ. ಆದರೆ ವ್ಯಾಕರಣವ
ನ್ನು ಮುಗಿಸಿದಾಗ್ಯೂ ಭಾಷಾರೂಢಿಯ ಅಜ್ಞಾನವು ಹಾಗೇ
ಉಳಿಯುವದು. ವಾಕ್ಯಗಳಲ್ಲಿ ಶಬ್ದಗಳನ್ನು ಅಡುವ ಕ್ರ
ಮವು ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ತರದಿ
ರುತ್ತವೆ. "ಮೋರೆ ಕೈಗಳನ್ನು ತೊಳಿದುಕೊಳ್ಳಲಿ
ಕ್ಕೆ ತಣ್ಣೀರು ತಾ" ಎಂಬ ಜೋಡು ಸುಲಭ ವಾಕ್ಯ
ನ್ನು ತಕ್ಕೊಳ್ಳುವ. ಇದು ಮರಾಠಾ ಭಾಷೆಯಲ್ಲಿ, "ಮೋ
ರೆ ಮತ್ತು ಕೈಗಳು ತೊಳಯಲಿಕ್ಕೆ ತಣ್ಣೀರು ತಾ"
ಹಿಂದುಸ್ಥಾನಿಯಲ್ಲಿ, "ತಣ್ಣೀರು ತಾ ಮೋರೆ ಮತ್ತು
ಕೈಗಳು ತೊಳೆಯಲಿಕ್ಕೆ" ಇಂಗ್ಲಿಷದಲ್ಲಿ, "ತಾ ತಣ್ಣೀ
ರು ತೊಳೆಯಲಿಕ್ಕೆ ನನ ಮೋರೆ ಮತ್ತು ಕೈಗಳು"
ತುಳೂ ಭಾಷೆಯಲ್ಲಿ, "ತಣ್ಣೀರು ನನಗಾಗಿ ತಾ ಮೋ
ರೆ ನನ್ನದು ಮತ್ತು ಕೈಗಳು ನನ್ನವು ತೊಳೆಯಲಿಕ್ಕೆ"
ಇತ್ಯಾದಿ. ಇವರಿಂದ ಇದಕ್ಕಿಂತ ಹಚ್ಚಿಗೆ ತೊಡಕಾದ ಮೊ
ದಲಾದ ವಾಕ್ಯಗಳಲ್ಲಿ ಎಷ್ಟು ತೊಂದರೆ ಇರುತ್ತದೆಂಬದನ್ನು
ಸುಲಭವಾಗಿ ತರ್ಕಿಸಬಹುದು. ಆದರೆ ಭಾಷೆಯು ಅಭ್ಯಾ
ಸದಲ್ಲಿ ಇದಕ್ಕಿಂತಲೂ ಬಹಳ ಹಚ್ಚಿಗೆ ಅಕ್ಕರಿಸ್ಟಾದ ಪ್ರಸಂ
ಗಳು ಇನ್ನೂ ಕೆಲವುಂಟು. ಅವು ಯಾವವೆಂದರೆ
ಒಂದೇ ಅರ್ಥವನ್ನು ಒಂದೇ ಭಾಷೆಯಲ್ಲಿ ಹಲವು
ಪ್ರಕಾರವಾಗಿ ವ್ಯಕ್ತ ಪಡಿಸುವ ರೀತಿಯು, ಈ ಕೆಲ ಕೆಲ

ಪ್ರ ಪದಗಳಂನು ಲೋಪ ಮಾಡಿ ಪ್ರಯೋಗಿಸಲ್ಪಡುವ ವಾಕ್ಯಗಳು, ೭ ಲಕ್ಷಣೈಕ ವಾಕ್ಯಗಳು (ಇವನು ಕಣ್ಣಿಸಿದ್ದಿನೆ), ೮ ಸಂಕಲಿತ ಶಬ್ದಗಳು (ತಲೆದೂಗು, ಎಮ್ಮೆಯು ಮೇಲಿನ ಕೈ), ೯ ಗಾಬರಿಗಳು, ಇತ್ಯಾದಿ.

ಇಂಥಾ ಬಿಗಿಯಾದ ಸಂಗತಿಗಳಂನು ಕುರಿತು ವ್ಯಾಕರಣವು ಏನೇನು ಕಲಿಸುವದಿಲ್ಲ, ಇದೇ ಮೇರಿಗೆ ಶಬ್ದಗಳ ಉಚ್ಚಾರಗಳೂ, ಅವುಗಳ ವ್ಯುತ್ಪತ್ತಿಯೂ, ಅರ್ಥಭೇದಗಳೂ ಸಹ ವ್ಯಾಕರಣದಲ್ಲಿ ಎಷ್ಟು ಮಾತ್ರವೂ ತಿಳಿಯುವದಿಲ್ಲ. ತಾತ್ಪರ್ಯ ಏನೆಂದರೆ, ಕಲಿಯುವವರು ಆತುರ ಪಟ್ಟು ಪಡುಕುವಂಥ ನಿಯಮಗಳೇನು ವ್ಯಾಕರಣದಲ್ಲಿ ಬೊರೆಯುವದಿಲ್ಲ; ವಾಡಿಕೆಯಾಗಿ ಸುಲಭವಾಗಿರುವಂಥ ನಿರುಪಯುಕ್ತ ಪ್ರಸಕ್ತಿಗಳಂನು ಕುರಿತು ಮಾತ್ರ ಅದರಲ್ಲಿ ಉದ್ದುದ್ದ ನಿಯಮಗಳು ವಿಗ್ರಹವಾಗಿ ಬರೆಯಲ್ಪಟ್ಟಿರುತ್ತವೆ. ಇವಲ್ಲವೆ ವ್ಯಾಕರಣದ ನಿಯಮಗಳು ಬಸ್ಸು ತರವಾಗಿ ಸಂಗಡಿಗ್ರಸ್ತ ವಿರುತ್ತವೆ ಈ ನಿಯಮಗಳ ಕಾರಣವಂತು ವ್ಯಾಕರಣವಿಷಯವೇ ಅಲ್ಲ. (ಮುಂದೆ ಸಾಗುವದು)

ಭಾಷಾಂತರ.

ಇ೦ ವರ್ಣಸ್ಥಾನಗಳು— ಬಾಯೊಳಗೆ ಅಕ್ಷರಗಳು ಹುಟ್ಟುವ ಸ್ಥಾನಗಳಿಗೆ ವರ್ಣಸ್ಥಾನಗಳೆಂಬ ಪದದ (ಕ. ೫೦ನೇ ಪು.)

ಉದಾಹರಣೆ.

'ಅ, ಆ, ಕ, ಖ, ಗ, ಘ, ಙ, ಹ, ವಿಸರ್ಗಗಳು ಕಂಠಸ್ಥಾನದಲ್ಲಿ (ಗಂಟಲೊಳಗೆ) ಹುಟ್ಟುವದರಿಂದ ಕಂಠ್ಯವೆನಿಸುವವು.

'ಇ, ಈ, ಚ, ಛ, ಜ, ಝ, ಞ, ಯ, ಶ' ಕಾರಗಳು ತಾಲುಸ್ಥಾನದಲ್ಲಿ (ಅಂಗಳಲ್ಲಿ) ಹುಟ್ಟುವದರಿಂದ ತಾಲವ್ಯವೆನಿಸುವವು.

'ಋ, ಟ, ಠ, ಡ, ಢ, ಣ, ರ, ಷ, ಳ' ಕಾರಗಳು ಮೂರ್ಧಾಸ್ಥಾನದಲ್ಲಿ (ಅಂಗಳಿಗೂ ಹಲ್ಲುಗಳ ಬುಡಕ್ಕೂ ನಡುವಿರುವ ಸ್ಥಾನ) ಹುಟ್ಟುವದರಿಂದ ಮೂರ್ಧನ್ಯವೆನಿಸುವವು.

'ಌ, ತ, ಥ, ದ, ಧ, ನ, ಲ, ಸ' ಕಾರಗಳು ದಂತಸ್ಥಾನದಲ್ಲಿ (ಹಲ್ಲೊಳಗೆ) ಹುಟ್ಟುವದರಿಂದ ದಂತ್ಯವೆನಿಸುವವು.

'ಉ, ಊ, ಪ, ಫ, ಬ, ಭ, ಮ' ಕಾರಗಳು ಓಷ್ಠಸ್ಥಾನದಲ್ಲಿ (ತುಟಿಯಲ್ಲಿ) ಹುಟ್ಟುವದರಿಂದ ಓಷ್ಠ್ಯವೆನಿಸುವವು.

'ಎ, ಏ, ಐ' ಕಾರಗಳು ಕಂಠತಾಲುಗಳಿಂದ ಹುಟ್ಟುವ ಕಾರಣ ಕಂಠತಾಲವ್ಯವೆನಿಸುವವು.

'ಒ, ಓ, ಔ' ಕಾರಗಳು ಕಂಠೌಷ್ಠ್ಯಗಳಿಂದ ಹುಟ್ಟುವ ಕಾರಣ ಕಂಠೌಷ್ಠ್ಯವೆನಿಸುವವು.

ಅನುಸ್ವಾರವು ನಾಸಿಕೆಯ ಸಹಾಯದಿಂದ ಹುಟ್ಟುತ್ತದೆ.

'ವ' ಕಾರವು ದಂತೌಷ್ಠ್ಯಗಳಿಂದ ಹುಟ್ಟುವ ಕಾರಣ ದಂತೌಷ್ಠ್ಯವೆನಿಸುವದು.

* ಕಾಗುಣಿತಾಕ್ಷರ (ಕ+ಆ+ಗುಣಿತ+ಅಕ್ಷರ) 'ಕ' ಕಾರ ಮುಂತಾಗಿ ಹೆಚ್ಚು ಮಾಡಿಕೊಂಡ ಅಕ್ಷರಗಳು.

ದ ವ್ಯಂಜನಗಳು ಸ್ವರಯುಕ್ತವಾಗದೇ ಉಚ್ಚಾರವಾಗುವದಿಲ್ಲ; ಸ್ವರ ಶೇರದಾಗ ಈ ವ್ಯಂಜನಗಳು ಅರ್ಧಾಕ್ಷರವೆನಿಸುವವು. ಆ ಕಾರಣ ಈ ವ್ಯಂಜನಗಳಿಗೆ ಸ್ವರಗಳನ್ನು ಕೂಡಿಸಿ ಉಚ್ಚಾರಣೆಗೆ ಸರಿಯಾಗುವಂತೆ ಬಳ್ಳಿಗಳನ್ನು ಮಾಡಿಕೊಂಡಿದ್ದಾರೆ. ಆ ಬಳ್ಳಿಗಳೇ ಕಾಗುಣಿತಾಕ್ಷರಗಳು.

ಉದಾಹರಣೆ.

'ಕ್' ಈ ವ್ಯಂಜನಕ್ಕೆ 'ಅ' ಸ್ವರ ಕೂಡಿದಾಗ 'ಕ' ಅಕ್ಷರವಾಗುವದು.

ಕ್	ಆ	ಕಾ
ಕ್	ಇ	ಕಿ
ಕ್	ಈ	ಕೀ
ಕ್	ಉ	ಕು
ಕ್	ಊ	ಕೂ
ಕ್	ಋ	ಕೃ
ಕ್	ೠ	ಕೄ
ಕ್	ಎ	ಕೆ
ಕ್	ಏ	ಕೇ
ಕ್	ಐ	ಕೈ
ಕ್	ಒ	ಕೊ
ಕ್	ಓ	ಕೋ

ಕ್	ಟಿ	ಕಿ
ಕ್	ಅಂ	ಕಂ
ಕ್	ಅಃ	ಕಃ

ಈ ಮೇರೆಗೆ 'ಳ' ಕಾರದ ವರೆಗೆ ಆದ ಬಳ್ಳಿಗಳ ಕೊಗುಣೆತಾಪ್ಪತಗಳು.

(೩) ವ್ಯಂಜನಗಳಿಗೆ ಸ್ವರಗಳು ಕೂಡಿ ಬಳ್ಳಿಗಳ ಆದ ಸ್ವರಚಿಹ್ನಗಳೂ ಅವುಗಳ ಸಂಜ್ಞೆಗಳೂ ಯಾವ ವೆಂದರೆ.

ಸ್ವರ	ಚಿಹ್ನ	ಸಂಜ್ಞೆ
ಅ	ೆ ಲೋಪ	ತಲಕಟ್ಟು
ಆ	ಾ	ಆಳ
ಇ	ಿ	ಒಳಗುಡಿಸು*
ಈ	ೀ	ಹೊರಗುಡಿಸು
ಉ	ು	ಕೊಂಬು
ಊ	ೂ	ಕೊಂಬಿನ ಆಳ
ಋ	ೃ	ಕರಾಳ
ಎ	ೆ	ಮೇಲ್ಗುಡಿಸು
ಏ	ೇ	"
ಐ	ೈ	ಕೆಳಗೈತ
ಒ	ೊ	ಒತ್ತ್ವ
ಓ	ೋ	ಓತ್ತ್ವ
ಔ	ೌ	ಔತ್ತ

* ಗುಡಿಕಟ್ಟು=ವರ್ಣಮಾತೃಕೆಯಲ್ಲಿ (ಕಾಂತಲಿಪಿಕಾರ). ಅಂದರೆ ಕಟ್ಟಿ ದುಡಿದ ವರ್ಣ.

೫ಳ ದ್ವಿತ್ವಾಕ್ಷರಗಳು—ನಡುವೆ ಸ್ವರವಿಲ್ಲದೆ ಎರಡೂ ಮೂರೂ ವ್ಯಂಜನಗಳು ಒಂದಕ್ಕೊಂದು ಕೂಡಿ ಆದ ಅಕ್ಷರಗಳು; ಇವುಗಳಿಗೆ ಒತ್ತಕ್ಕರವೆಂತಲೂ ಪೆಸರು. ಉದಾ: ಕ್+ರ=ಕ್ರ, ತ್+ವ=ತ್ವ, ಬ್+ಲ=ಬ್ಲ, ಸ್+ತ್+ರೀ=ಸ್ತ್ರೀ ಇತ್ಯಾದಿ.

(೫) ದ್ವಿತ್ವಾಕ್ಷರಗಳ ಸಂಯೋಗ ಚಿನ್ಹೆಗಳು—'ತ, ನ, ಮ, ಯ, ರ, ಲ' ಇವುಗಳನ್ನು ಕ್ರಮದಿಂದ 'ತ್, ನ್, ಮ್, ಯ್, ರ್, ಲ್' ಹೀಗೆ ಒತ್ತು ಕೊಡುತ್ತಾರೆ. ಉದಾ: ಸ್ತ, ಸ್ನ, ಸ್ಮ, ಸ್ಯ, ಸ್ರ, ಸ್ಲ. ಕೆಲವುಗಳ ಮೂಲ ಸ್ವರೂಪ ಹಾಗೇ ಉಳಿಯುವವು. ಉದಾ: ಜ್ಞ, ಜ್ಞ, ಷ್ಣ, ಣ್ಣ, ಬ್ಬ. ಕೆಲವುಗಳ ತಲೆಕಟ್ಟು ಕ್ಕೋಗುವದು. ಉದಾ: ಕ್ಕ, ಗ್ಗ, ಪ್ಪ, ಜ್ಜ, ಶ್ಶ, ಡ್ಡ, ದ್ದ, ಪ್ಪ, ವ್ವ, ಶ್ಶ, ಪ, ಸ್ನ, ಟ್ಟ, ಳ್ಳ.

೫೫ ಮಹಾಪ್ರಾಣಕ್ಕೆ ಮಹಾಪ್ರಾಣದ ಒತ್ತು ಬರುವದಿಲ್ಲ. ಅಂಥಾ ಪ್ರಸಂಗ ಬಂದಾಗ ಮೊದಲಿನ ಮಹಾಪ್ರಾಣವು ಅಲ್ಪಪ್ರಾಣವಾಗುವದು. (೭೦ ನೇ ನಿಯಮ ನೋಡು). ಉದಾ: ಇಚ್ಛೆ, ಲೆಕ್ಕ, ಕಬ್ಬಪ (ಆವೆ), ಸ್ವಚ್ಛ ಇತ್ಯಾದಿ.

೫೬ 'ರ್' ಕಾರಕ್ಕೆ ಮತ್ತೊಂದು ಅಕ್ಷರವನ್ನು ಒತ್ತು ಕೊಡುವದಕ್ಕೆ ಬದಲಾಗಿ ಆ ಅಕ್ಷರದ ಮುಂದೆ 'ರ' ನೀಳು ಬರೆಯುತ್ತಾರೆ. ಉದಾ: ವರ್ತಮಾನ=ವರ್ತಮಾನ, ಕಾರ್ಯ=ಕಾರ್ಯ ಇತ್ಯಾದಿ.

೫೭ ಹಳೆಗನ್ನಡದಲ್ಲಿ ಹಲವು ವ್ಯಂಜನಾಂತ (ಹಲಂತ) ಶಬ್ದಗಳುಂಟು; ಆ ಶಬ್ದಗಳ ಕಡೆಯ ವರ್ಣಗಳು

ಪೂವವಂದರೆ. 'ಯರ್, ರ್, ಲ್, ಣ್, ನ್, ಳ್'
ಗಳು (ಶ. ೪೮ ನೇ ಸೂ.)

ಉದಾಹರಣೆ.

ಯಕಾರಕ್ಕೆ—ಬಾಯರ್, ಬೆಯರ್, ಕೊಯರ್, ಪಾಯರ್ ಸಾಯರ್ ಇತ್ಯಾದಿ.

ರಕಾರಕ್ಕೆ—ನಾರ್, ಬೇರ್, ತೇರ್, ತೆಮರ್, ಬೆವರ್, ಉಸಿರ್, ನೀರ್, ಮೊಸರ್, ತಳರ್, ಕುಳಿರ್, (ಜಳ) ಇತ್ಯಾದಿ.

ಲಕಾರಕ್ಕೆ—ಪಾಲ್, ಕಾಲ್, ಕೋಲ್, ಸಾಲ್ ನೂಲ್, ಕಲ್, ಹಲ್, ನೆಲ್, ಬಿಲ್, ಕವಲ್, ಹಗಲ್, ಬಗಲ್ ಇತ್ಯಾದಿ.

ಣಕಾರಕ್ಕೆ—ಪಣಣ್, ನಾಣ್, ಜಾಣ್, ಮಾಣ್, ಗೇಣ್, ಬಣ್, ಮಣ್, ಪ್ರೊಣ್, ಪೆಣ್, ಇತ್ಯಾದಿ.

ನಕಾರಕ್ಕೆ—ಬಿನ್, ಬೆನ್, ಏನ್, ಜೇನ್, ಸೀನ್, ನೀನ್, ಬಾನ್ (ಆಕಾಶ) ಇತ್ಯಾದಿ.

ಳಕಾರಕ್ಕೆ—ಕುಳ್, ತಳ್, ಮಿದುಳ್, ಕರುಳ್, ಕರುಳ್, ತಿರುಳ್, ಮುಗುಳ್, ಪೊಗಳ್ ಬೀಳ್ ಇತ್ಯಾದಿ.

(೬) 'ಡ್' ಕಾರವು ವಿಕಲ್ಪದಿಂದ ಬರುತ್ತದೆ ಉ ಕಾಡ್, ಕೋಡ್, ನಾಡ್ ಇತ್ಯಾದಿ.

(ಮುಂದೆ ಸಾಗುವದು.)

ಗಂಗಾಧರ ಮಡಿವಾಳೇಶ್ವರ ತೂರಮರಿ
ಅ. ತ್ರಾನಸ್ಲೇಟರ್.

ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕಳೆದ ಅಗಷ್ಟೋಬರ ತಿಂಗಳಲ್ಲಿ ಆದ ಸರಟಿಫಿಕೀಟ ಪರಿಕ್ಷೆಯಲ್ಲಿ ಪಡೆದಗುಣಗಳ ಕ್ರಮವನ್ನು ಅನುಸರಿಸಿ ಪಾಸಾದವರ ಹೆಸರುಗಳ ಪಟ್ಟಿ.

ನಂಬರ.	ಹೆಸರು. ಎರಡನೇ ವರಷದ ಅಭ್ಯಾಸವವರು ಫಸ್ಟ್ ಕ್ಲಾಸ ಸರಟಿಫಿಕೀಟವನ್ನು ಪಡಕೊಂಡವರು.	ಗುಣಗಳಲ್ಲಿ ಪಾಸಾದ ಗುಣಗಳು.	೧೦೦ಕ್ಕೆ ಪಾಸಾದಗುಣಗಳು.	ಎಷ್ಟು ರೂಪಾಯಿದ ಲಾಯಖಿ ಸರಟಿಫಿಕೀಟದೊರಿಯಿತು.
೧	ರುದ್ರಾ ಬಂಡೆಪ್ಪಾ ರೇವಡಿ.	೪೪೪	೭೨	೭೫
೨	ಮಲ್ಲಾರ ವಾಸುದೇವ ಕುಲಕರ್ಣಿ.	೪೭೪	೭೯	೭೫
೩	ಅನಂದ ಬಾಳಕ್ರಷ್ಣ ದೇಶಪಾಂಡೆ.	೪೭೦	೭೮	,,
೪	ದಾಜಿ ನಾರಾಯಣ ಸೋಹನಿ.	೪೬೬	೭೭	೭೦
೫	ರಾಮಕ್ರಷ್ಣ ಕಾಶಿನಾಥ ಧಾರವಾಡ.	೪೦೫	೬೭	,,
೬	ಚನ್ನಪ್ಪಾ ಬಸಪ್ಪಾ ಪುಟ್ಟಿನ.	೪೦೪	೬೭	,,
೭	ಸಾಂಬಾಜಿ ಬಾಸ್ಕೊಜಿ ದಾಸೆ.	೪೦೦	೬೬	,,
೮	ವೀರಭದ್ರಪ್ಪಾ ವೀರಬಸಪ್ಪಾ ಶ್ರಿಂಗಾರಿ.	೪೦೦	೬೬	,,

| | | |

೧	ಸಂಖ್ಯೆಗಳನ್ನು ಅಂಕಿಗಳಲ್ಲಿ ಬರೆಯರಿ.		
೨	ಇಪ್ಪತ್ತೊಂಬತ್ತು ಮೂವತ್ತೊಂಬತ್ತು ಐವತ್ತೊಂಬತ್ತು.		
೩	ಮೂವತ್ತು ಮೂವತ್ತೊಂದು ಮೂವತ್ತೆರಡು ಮೂವತ್ತಮೂರು.		
೪	ಮೂವತ್ತು ಸಂಖ್ಯೆಯಿಂದ ಹಿಂಬರೆಯಿರಿ.		
೫	ಮೂವತ್ತೈದು ಮೂವತ್ತಾರು ಮೂವತ್ತೇಳು.		
೬	ಮೂವತ್ತೊಂಬತ್ತು ಮೂವತ್ತೆಂಟು ಮೂವತ್ತೇಳು.		
೭	ಕೊಟ್ಟಿರುವ ಸಂಖ್ಯೆಗಳಿಗೆ ಮುಂದಿನ ಸಂಖ್ಯೆಗಳನ್ನು ಬರೆಯಿರಿ.		
೮	೫೦ ರಷ್ಟಾಗಲು ಇನ್ನೆಷ್ಟು ಬೇಕು.		
೯	೧೦೦ ರಷ್ಟಾಗಲು ಇನ್ನೆಷ್ಟು ಬೇಕು.		
೧೦	ಸಂಖ್ಯೆಗಳನ್ನು ಅಕ್ಷರಗಳಲ್ಲಿ ಬರೆಯರಿ.		
೧೧	ಇಪ್ಪತ್ತೊಂಬತ್ತು ಮೂವತ್ತೊಂಬತ್ತು ಐವತ್ತೊಂಬತ್ತು.		
೧೨	ಮೂವತ್ತು ಮೂವತ್ತೊಂದು ಮೂವತ್ತೆರಡು ಮೂವತ್ತಮೂರು.		
೧೩	ಮೂವತ್ತು ಸಂಖ್ಯೆಯಿಂದ ಹಿಂಬರೆಯಿರಿ.		
೧೪	ಮೂವತ್ತೈದು ಮೂವತ್ತಾರು ಮೂವತ್ತೇಳು.		
೧೫	ಮೂವತ್ತೊಂಬತ್ತು ಮೂವತ್ತೆಂಟು ಮೂವತ್ತೇಳು.		

| | | |

| | | |

ಬಂ.ಸಾಯಿಬಂ/ ಪ್ರೀ.ಬಿಸಿಡಿ ಅಧಿಸೂ.
೨ ಪ್ರೀ.ಬಿ ಮಾಡಿಕೆ ನಿರ್ಣಯ.
ಬಂ.ಮಾಯಿಬಂ/ ಸೆ.ಬಿ ಪ್ರಮುಖ ಕಾರ್ಯಕ್ರ.
ಸಾಮಾ.ಬಿ ಪ್ರೀ.ಬಿ ಮಾಡಿಕೆ ಮಾಡಿಕ.
ಅಂತಿ ಪ್ರೀ.ಬಿ ಮಾ.ಸಾ - ಬಿ ಬಿ.
೨.ಪ್ರೀ.ಬಿ ಮಾಡಿಕೆ ಮಾಡಿಕ.

೧೮ ಸೂಚನೆ ಮಾಡಿ.
೧೫ ಸಾಮಾನ್ಯ ಮಾಡಿ.
ಸೂಚನೆ.
೪ ಪ್ರೀ.ಬಿ ಮಾಡಿಕೆಯಿಂದ ಮಾಡಿಕ.
೨ ಸೂ.ಬಿ ಮಾಡಿಕೆ ಮಾಡಿ.
೨ ಸಾಮಾನ್ಯ ಮಾಡಿ.

೧೮ | ೪

೧೦ ೧೨ ೧೪ ೧೬ ೧೮ ೨೦ ೨೨ ೨೪ ೨೬ ೨೮ ೩೦ ೩೨ ೩೪ ೩೬ ೩೮ ೪೦ ೪೨ ೪೪ ೪೬ ೪೮ ೫೦ ೫೨ ೫೪ ೫೬ ೫೮ ೬೦ ೬೨ ೬೪ ೬೬ ೬೮ ೭೦ ೭೨ ೭೪ ೭೬ ೭೮ ೮೦ ೮೨ ೮೪ ೮೬ ೮೮ ೯೦ ೯೨ ೯೪ ೯೬ ೯೮ ೧೦೦ ೧೦೨ ೧೦೪ ೧೦೬ ೧೦೮ ೧೧೦ ೧೧೨ ೧೧೪ ೧೧೬ ೧೧೮ ೧೨೦ ೧೨೨ ೧೨೪ ೧೨೬ ೧೨೮ ೧೩೦ ೧೩೨ ೧೩೪ ೧೩೬ ೧೩೮ ೧೪೦ ೧೪೨ ೧೪೪ ೧೪೬ ೧೪೮ ೧೫೦ ೧೫೨ ೧೫೪ ೧೫೬ ೧೫೮ ೧೬೦ ೧೬೨ ೧೬೪ ೧೬೬ ೧೬೮ ೧೭೦ ೧೭೨ ೧೭೪ ೧೭೬ ೧೭೮ ೧೮೦ ೧೮೨ ೧೮೪ ೧೮೬ ೧೮೮ ೧೯೦ ೧೯೨ ೧೯೪ ೧೯೬ ೧೯೮ ೨೦೦ ೨೦೨ ೨೦೪ ೨೦೬ ೨೦೮ ೨೧೦ ೨೧೨ ೨೧೪ ೨೧೬ ೨೧೮ ೨೨೦ ೨೨೨ ೨೨೪ ೨೨೬ ೨೨೮ ೨೩೦ ೨೩೨ ೨೩೪ ೨೩೬ ೨೩೮ ೨೪೦ ೨೪೨ ೨೪೪ ೨೪೬ ೨೪೮ ೨೫೦ ೨೫೨ ೨೫೪ ೨೫೬ ೨೫೮ ೨೬೦ ೨೬೨ ೨೬೪ ೨೬೬ ೨೬೮ ೨೭೦ ೨೭೨ ೨೭೪ ೨೭೬ ೨೭೮ ೨೮೦ ೨೮೨ ೨೮೪ ೨೮೬ ೨೮೮ ೨೯೦ ೨೯೨ ೨೯೪ ೨೯೬ ೨೯೮ ೩೦೦ ೩೦೨ ೩೦೪ ೩೦೬ ೩೦೮ ೩೧೦ ೩೧೨ ೩೧೪ ೩೧೬ ೩೧೮ ೩೨೦ ೩೨೨ ೩೨೪ ೩೨೬ ೩೨೮ ೩೩೦ ೩೩೨ ೩೩೪ ೩೩೬ ೩೩೮ ೩೪೦ ೩೪೨ ೩೪೪ ೩೪೬ ೩೪೮ ೩೫೦ ೩೫೨ ೩೫೪ ೩೫೬ ೩೫೮ ೩೬೦ ೩೬೨ ೩೬೪ ೩೬೬ ೩೬೮ ೩೭೦ ೩೭೨ ೩೭೪ ೩೭೬ ೩೭೮ ೩೮೦ ೩೮೨ ೩೮೪ ೩೮೬ ೩೮೮ ೩೯೦ ೩೯೨ ೩೯೪ ೩೯೬ ೩೯೮ ೪೦೦ ೪೦೨ ೪೦೪ ೪೦೬ ೪೦೮ ೪೧೦ ೪೧೨ ೪೧೪ ೪೧೬ ೪೧೮ ೪೨೦ ೪೨೨ ೪೨೪ ೪೨೬ ೪೨೮ ೪೩೦ ೪೩೨ ೪೩೪ ೪೩೬ ೪೩೮ ೪೪೦ ೪೪೨ ೪೪೪ ೪೪೬ ೪೪೮ ೪೫೦ ೪೫೨ ೪೫೪ ೪೫೬ ೪೫೮ ೪೬೦ ೪೬೨ ೪೬೪ ೪೬೬ ೪೬೮ ೪೭೦ ೪೭೨ ೪೭೪ ೪೭೬ ೪೭೮ ೪೮೦ ೪೮೨ ೪೮೪ ೪೮೬ ೪೮೮ ೪೯೦ ೪೯೨ ೪೯೪ ೪೯೬ ೪೯೮ ೫೦೦ ೫೦೨ ೫೦೪ ೫೦೬ ೫೦೮ ೫೧೦ ೫೧೨ ೫೧೪ ೫೧೬ ೫೧೮ ೫೨೦ ೫೨೨ ೫೨೪ ೫೨೬ ೫೨೮ ೫೩೦ ೫೩೨ ೫೩೪ ೫೩೬ ೫೩೮ ೫೪೦ ೫೪೨ ೫೪೪ ೫೪೬ ೫೪೮ ೫೫೦ ೫೫೨ ೫೫೪ ೫೫೬ ೫೫೮ ೫೬೦ ೫೬೨ ೫೬೪ ೫೬೬ ೫೬೮ ೫೭೦ ೫೭೨ ೫೭೪ ೫೭೬ ೫೭೮ ೫೮೦ ೫೮೨ ೫೮೪ ೫೮೬ ೫೮೮ ೫೯೦ ೫೯೨ ೫೯೪ ೫೯೬ ೫೯೮ ೬೦೦ ೬೦೨ ೬೦೪ ೬೦೬ ೬೦೮ ೬೧೦ ೬೧೨ ೬೧೪ ೬೧೬ ೬೧೮ ೬೨೦ ೬೨೨ ೬೨೪ ೬೨೬ ೬೨೮ ೬೩೦ ೬೩೨ ೬೩೪ ೬೩೬ ೬೩೮ ೬೪೦ ೬೪೨ ೬೪೪ ೬೪೬ ೬೪೮ ೬೫೦ ೬೫೨ ೬೫೪ ೬೫೬ ೬೫೮ ೬೬೦ ೬೬೨ ೬೬೪ ೬೬೬ ೬೬೮ ೬೭೦ ೬೭೨ ೬೭೪ ೬೭೬ ೬೭೮ ೬೮೦ ೬೮೨ ೬೮೪ ೬೮೬ ೬೮೮ ೬೯೦ ೬೯೨ ೬೯೪ ೬೯೬ ೬೯೮ ೭೦೦ ೭೦೨ ೭೦೪ ೭೦೬ ೭೦೮ ೭೧೦ ೭೧೨ ೭೧೪ ೭೧೬ ೭೧೮ ೭೨೦ ೭೨೨ ೭೨೪ ೭೨೬ ೭೨೮ ೭೩೦ ೭೩೨ ೭೩೪ ೭೩೬ ೭೩೮ ೭೪೦ ೭೪೨ ೭೪೪ ೭೪೬ ೭೪೮ ೭೫೦ ೭೫೨ ೭೫೪ ೭೫೬ ೭೫೮ ೭೬೦ ೭೬೨ ೭೬೪ ೭೬೬ ೭೬೮ ೭೭೦ ೭೭೨ ೭೭೪ ೭೭೬ ೭೭೮ ೭೮೦ ೭೮೨ ೭೮೪ ೭೮೬ ೭೮೮ ೭೯೦ ೭೯೨ ೭೯೪ ೭೯೬ ೭೯೮ ೮೦೦ ೮೦೨ ೮೦೪ ೮೦೬ ೮೦೮ ೮೧೦ ೮೧೨ ೮೧೪ ೮೧೬ ೮೧೮ ೮೨೦ ೮೨೨ ೮೨೪ ೮೨೬ ೮೨೮ ೮೩೦ ೮೩೨ ೮೩೪ ೮೩೬ ೮೩೮ ೮೪೦ ೮೪೨ ೮೪೪ ೮೪೬ ೮೪೮ ೮೫೦ ೮೫೨ ೮೫೪ ೮೫೬ ೮೫೮ ೮೬೦ ೮೬೨ ೮೬೪ ೮೬೬ ೮೬೮ ೮೭೦ ೮೭೨ ೮೭೪ ೮೭೬ ೮೭೮ ೮೮೦ ೮೮೨ ೮೮೪ ೮೮೬ ೮೮೮ ೮೯೦ ೮೯೨ ೮೯೪ ೮೯೬ ೮೯೮ ೯೦೦ ೯೦೨ ೯೦೪ ೯೦೬ ೯೦೮ ೯೧೦ ೯೧೨ ೯೧೪ ೯೧೬ ೯೧೮ ೯೨೦ ೯೨೨ ೯೨೪ ೯೨೬ ೯೨೮ ೯೩೦ ೯೩೨ ೯೩೪ ೯೩೬ ೯೩೮ ೯೪೦ ೯೪೨ ೯೪೪ ೯೪೬ ೯೪೮ ೯೫೦ ೯೫೨ ೯೫೪ ೯೫೬ ೯೫೮ ೯೬೦ ೯೬೨ ೯೬೪ ೯೬೬ ೯೬೮ ೯೭೦ ೯೭೨ ೯೭೪ ೯೭೬ ೯೭೮ ೯೮೦ ೯೮೨ ೯೮೪ ೯೮೬ ೯೮೮ ೯೯೦ ೯೯೨ ೯೯೪ ೯೯೬ ೯೯೮ ೧೦೦೦

ಕಯಾರಮಾಡಿದ ತಾರೀಖು ಇಳಿ ಮಾಚಿಗ ನನ್ನ
ಸಿವಿಲಿನ ಇಸವಿ.

ಪ್ರಿ. ಟ್ರೆ. ಕ್ಲಾ. ಧಾರವಾಡ.

CORRESPONDENCE.
ಪತ್ರವ್ಯವಹಾರವು

ಜಾರುಬಂಡೆಯೂ ತಲೆಬಾವುಗವು.

ಪತ್ತು ಪಡುಗರು ಕೂಡಿ ಯತ್ತಿದಿ
ತತ್ತು ಪತ್ತಿಲೆ ಎಂದು ಕೂಗುತ|
ುತ್ತಿ ಬೇಗನೆ ಪತ್ತಿರೆನುತಲಿ ಭರದಿ ಪತ್ತುವರು||
ುತ್ತು ಮುತ್ತಲೆ ನೋಡು ತಲ್ಲವ|
ತ್ತರದ ಬಂಡೆಯನು ಯೀರುತ|
ತ್ತಿ ತವಕದಿ ಜೋರ ಬೇಕೆಲೆ ಯೆಂದು ಕೂಗುವರೂ||೩||
ಸ್ಪ.

ಈ ಜೋರಬಂಡಿಯು ಗದಗ ತಾಲೂಕ ಮುಳಗುಂದದ
ಪರ್ವಭಾಗದಲ್ಲಿ ಇದ್ದು ಕೃತ್ರಿಕ ಕುಸ್ತಿ ಇವಸ ಮು
ಉತ್ಸವವಾಗುವದು. ಇದು ಬಸ್ರ ಪ್ರಾತನದ್ದು.
ದು ಬಸ್ರು ದೊಡ್ಡ ಬಂಡೆಗಲ್ಲಿನ ಮೇಲೆ ಇಳಿಜಾರಾಗಿ
ರುವದರಿಂದ ಇದಕ್ಕೆ ಜಾರುಬಂಡೆ ಎಂಬ ಪಸಾಲಿ
ಗುಡ್ಡದ ಮಧ್ಯದಲ್ಲಿ ಹರಸಾಳಿಗಳು ಜಾರ ಕಗ್ಗ
ಈ ತೆಗ್ಗಿಗೆ ಪಡುಗರು ಎಣ್ಣೆಯನ್ನು ಕಟ್ಟಿದರೆ

ಧುರ್ರನೆ ಹಾರಿಸುತ್ತ ಜೋರುಬಂಡೆಯು ಕೆಳಗೆ ತಂದು ಇಳಿಸುವದು.

ಈ ಬಂಡೆಯ ಮೇಲೆ ಕಲ್ಲಿನ ಕತ್ತಿಯುಂಟು. ಪೂರ್ವಕಾಲದಲ್ಲಿ ಈ ಬಂಡೆಯ ಮೇಲೆ ಯಾವನೋ ಒಬ್ಬ ರಾಜನು ತಂನ ಕುದುರೆಯನ್ನು ಹತ್ತಿಸಿದ್ದನಂತೆ. ಅವನ ಕುದುರೆಯ ಹೆಜ್ಜೆಗಳು ಈಗಾಪರೂ ಮೂಡಿರುತ್ತವೆ. ಈ ಕಲ್ಲಿನ ಮೇಲಿಂದ ಮೇಲಕೆ ಹತ್ತಿದರೆ ಕಲ್ಲಿನ ನಗಾರಿ ಹತ್ತುತ್ತದೆ. ಆ ನಗಾರಿಯಂನು ಕಲ್ಲಿನಿಂದ ಹೊಡಿದರೆ ಆಯಿತು; ಖಣ ಖಣ ಸಪ್ಪಳವು ಕೇಳಲಾರಂಭಿಸುತ್ತದೆ.

ದೊಡ್ಡತಲೆ ಬಾವುಗವು.

ಮುಳಗುಂದದ ದಕ್ಷಿಣ ದಿಕೆನಲ್ಲಿ ಒಂದು ದೊಡ್ಡ ಗುಡ್ಡ ಉಂಟು. ಆ ಗುಡ್ಡವು ಅನೇಕ ಬಂಡೆಗಲ್ಲುಗಳಿಂದಾಗಿರುತ್ತದೆ. ಈ ಬಂಡೆಗಳ ಸಾಲುಗಳಲ್ಲಿ ಒಂದರ ಹಿಂದೆ ಪ್ರಾಚೀನ ಕಾಲದಲ್ಲಿ ಯಾವನೋ ಒಬ್ಬ ಗ್ರಹಸ್ಥನು ಸುಮಾರು ೭೫ ಘೂಟು ಎತ್ತರವಾದದ್ದೊಂದು ಮನುಷ್ಯ ವಿಗ್ರಹವನ್ನು ಕಟಿದಿಟ್ಟಿರುತ್ತಾನೆ. ಈ ವಿಗ್ರಹವು ಲಿಲ್ಲಿಪಟ್ಟಣ ದೇಶ ಸಂಚಾರವನ್ನು ಮಾಡಿದ ಗಳ್ಳಿವರನಂತೆ ಇರುವದು ಇದರ ಪೂರ್ಣರೂಪವನ್ನು ಕಟೆಯುವಷ್ಟರಲ್ಲಿ ಕರ್ತೃವಾಯುವ ಗ್ರಹಸ್ಥನು ರಕ್ತ ಕಾರಿ ತೀರಿ ಹೋದನು. ಅವನು ಈ ಮೂರ್ತಿಯ ಸೋರೆಯನ್ನಷ್ಟೇ ಚನ್ನಾಗಿ ಕಟದಿರುತ್ತಾನೆ. ಉಳಿದ ಅವಯವಗಳು ನಿಚ್ಚಳ ಕಾಣಿಸುವದಿಲ್ಲ. ಇವನನ್ನು ಈ ಮೂರ್ತಿಯು ತಾನೇ ತಿಂದು ಬಿಟ್ಟ ಕಾರಣ ಆ ಮನುಷ್ಯನ ರಕ್ತವು ಅದರ ಸೋರೆಯ ಮೇ

ಲೆ ಈಗಲಾದರೂ ಕಾಣಿಸುತ್ತದೆ. ಎಂದೂ ನೋಡದವರು ಇದನ್ನು ನೋಡಿದರೆ ಗದಗದ ನಡಗುತ್ತಾರೆ. ಇದರ ಹೆಸರು ದೊಡ್ಡ ತಲೆ ಬಾವುಗವು.

ಮು॥ಮುಳಗುಂದ. ತಾ॥೩೭॥೭॥೭೭ } ಮ. ಸ್ವಾ. ಜಕಾತೀ ಹೈಸ್ಕೂಲ ವಿದ್ಯಾರ್ಥಿ ಧಾರವಾಡ.

ಮಹಾರಾಜ ರಾ. ರಾ. ಮುರವತ್ರ ಕರ್ತರಾದ ಎಡೀಟರರ ಚರಣ ಸನ್ನಿಧಾನಕ್ಕೆ.

ವಿನಂತಿ ವಿಜ್ಞಾಪನೆ ಮಾಡಿ ಬರಕೊಳ್ಳುವದೇನಂದರೆ ಕೆಳಗೆ ಬರದ ನಾಲ್ಕು ಪಂಕ್ತಿಗಳಿಗೆ ತಮ್ಮ ಕರಕಮಲದಲ್ಲಿ ಉದ್ಭವಿಸುವ ಶಾಲಾಪತ್ರದಲ್ಲಿ ಸ್ಥಳಕೊಟ್ಟು ಛಾಪಿಸಿ ಪ್ರಶಿದ್ಧ ಮಾಡುವಿರೆಂದು ಅಪೇಕ್ಷಿಸುತ್ತೇನೆ.

ಸೈದಶಹಾ ಎಂಬವನು ಕಳಿಸಿದ ಲೆಖ್ಖವು ಕಳದ ಜುಲಾಯಿ ತಿಂಗಳಿನ ಶಾ. ಪ. ಪ್ರ. ೩೭೬ ದರಲ್ಲಿ ಛಾಪಿಸಿದೆ. ಅದನ್ನು ಬಿಡಿಸುವ ರೀತಿಯು.

ಇಲ್ಲಿ (ಶೆ) ಗುಡಿಗಳಿದ್ದು ಇವುಗಳಲ್ಲಿ (ಇ) ನೇ ಗುಡಿಯಲ್ಲಿ ಇಷ್ಟು ಒಟ್ಟು ಅಂತಾ ಇಲ್ಲ ಹಾಗು ಏರಿಸಿದ್ದು ಇಲ್ಲ ಅದರ ದಶೆಯಿಂದ ಬಾಕೀ ಉಳಿದ (ಳಿ) ಗುಡಿಗಳಿಗೆ ಏರಿಸಿದಷ್ಟೇ ಮೊದಲನೇ ಗುಡಿಗೂ ಏರಿಸಿದನು ಇವರಣ (ಳಿ) ಗುಡಿಗಳಿದ್ದವು ಎಂತ ತೀರ್ಮಾನ ಕೊಂಡಿತು.

ಇ ನೇ ಗುಡಿಯಲ್ಲಿ ಒಂದಕ್ಕೆ ಎರಡಾಗಲಿ ಎಂದನು ಎಂತಾ ೨

೨ ನೇ ಗುಡಿಯಲ್ಲಿ ಒಂದಕ್ಕೆ ಏಳಾಗಲಿ ಎಂದನು ಅದರ ದಶೆಯಿಂದ ೭

ಪ ನೇ ಗುಣಿಯಲ್ಲಿ ಒಂದಕ್ಕೆ ಮೂರಾಗಲಿ ಎಂದನ
ಆದ್ದರಿಂದ ವಿ
ಫ ನೇ ಗುಣಿಯಲ್ಲಿ ಒಂದಕ್ಕೆ ಐದಾಗಲಿ ಎಂದನ
ಅಂತಾ ಖಿ

೨×೩×೫×೭ ಇವುಗಳ ಲಘುತ್ತಮ ಭಾಜ್ಯ ಸ
(೨೧೦) ಇವು ಪ್ರತಿ ಯೊಂದೊಂದು ಗುಣಿಗೆ ಏರಿಸಿ
ವ್ರ ಪಾಗು ಇನ್ನು ತಂಪ ಸ್ಫೂವು ತೆಗೀ ತಕ್ಕದ್ದು.

೨೧೦÷೨=೧೦೫ ┐
೧೦೫÷೩= ೩೫ │
೩೫÷೫= ೭ │ ಇವುಗಳ ಬೇರಿಜವು ೧೨೬
೭÷೭= ೧ ┘

ಇವು ನಾಲ್ಕು ಗುಣಿಗಳ ದಶೆಯಿಂದ
ಪ್ರಪ್ಪಗಳು ಮತ್ತು ದಶ ಒಂದು ಗು

ಣಿಗೆ ೨೧೦ ರಂತೆ ಐದಾ ಗುಣಿಗೆ ಏ ಸಿಅನೆ ಆ ಕಾರಣ
(೧) ನೇ ಗುಣಿಗೆ ಏರಿಸಿನ್ನು (೨೧೦) + ೧೨೬ ಇ
ವು ನಾಲ್ಕು ಗುಣಿಗಳ ನೆಕೆಯಿಂದ ತಂಪವ್ನು ಅಂತು ವಿಳಿ೬
ವುನೆಯಿಂದ ತಂಪ ಪ್ರಪ್ಪವು.

ಶಾಲಾಪತ್ರಕವು.

ಪುಸ್ತಕ ೩೨] [ಸಂಚಿಕೆ ೩೨

ತಾರೀಖು, ೨೫ನೇ ಮೂಹೆ ಮೂರ್ಚ, ೧೮೭೭.

EDUCATIONAL INTELLIGENCE.

ವಿದ್ಯಾಸುಧಾರಣಾಸಂಬಂಧವಾದ ವೃತ್ತಾಂತಗಳು.

ಮೆಹಬೂಬನ ಡಾಯರೆಕ್ಟರ ಧೊರೆಗಳವರು ಈ ತಿಂಗಳನ ಆರಂಭದಲ್ಲಿ ಬೆಳಗಾಂವಿಗೆ ಬಂದಿದ್ದರು. ಆದರೆ ಮುಂದಕ್ಕೆ ಧಾರವಾಡದ ಕಡೆಗೆ ಬರದೆ ಜರೂರಿನ ಕೆಲಸದ ನಿಮಿತ್ತವಾಗಿ ಹಿಂದಿರುಗಿ ಮುಂಬಯಿಗೆ ಹೋಗಿ ಇನ್ನೂರು ತಿಂಗಳನ ಹಕ್ಕಿನ ರಜೆಯನ್ನು ತಕ್ಕೊಂಡಿದ್ದಾರೆ. ಅವರು ಬರುವ ಮೇ ತಿಂಗಳಲ್ಲಿ ವಿಲಾಯತಿಗೆ ಹೋಗತಕ್ಕವರೆಂದು ಕೇಳುತ್ತೇವೆ.

ಮೆಹಬೂಬನ ರಸೆಲ್ ಧೊರೆಗಳು ಎಪ್ರೀಲ್ ೫ನೇ ತಾರೀಖಿನಲ್ಲಿ ರಾ. ಸಾ. ಚನಬಸಪ್ಪನವರ ಕಡೆಯಿಂದ ಕಾರವಾಡದಲ್ಲಿ ತಮ್ಮ ಆಫೀಸಿನ ಚಾರ್ಜವನ್ನು ತಕ್ಕೊಳ್ಳುವರೆಂದು ವರ್ತಮಾನ ವದೆ.

ರಾ. ರಾ. ವೆಂಕಟ ರಂಗೋ ಕಟ್ಟೀ ಇವರು ಮುಂಬ
ಯಿಯಲ್ಲಿ ಹಿರೀಯೆಂಟಲ ತ್ರಾನ್ಸಲೇಟರರ ಆಫೀಸಿನಲ್ಲಿ
ಸಧ್ಯಕ್ಕೆ ಕಾಯುವೆಯ ಭಾಷಾಂತರದ ಕೆಲಸಕ್ಕೆ ನೇಮಿಸ
ಲ್ಪಟ್ಟು, ಅವರ ಸ್ಥಳದಲ್ಲಿ ರಾ. ರಾ. ಪಾಂಡುರಂಗ ವೆಂಕ
ಟೇಶ ಚಿಂತಾಮಣಿ ನೇತಕರ ಇವರು ಅಕ್ಟಿಂಗ ಪ್ರಕಾರ
ನೇಮಿಸಲ್ಪಡುವರೆಂದು ತಿಳಿದದೆ.

ಮಧ್ಯಭಾಗದಲ್ಲಿ ಮರಾಠೀ ತ್ರಾನ್ಸಲೇಟರರಾಗಿದ್ದ
ಮೇಜರ ಕ್ಯಾಂಡೀಸಾಹೇಬರು ವೃದ್ಧಾಪ್ಯದಿಂದ ಮರಣ
ಪಟ್ಟರು. ಇವರು ವಿದ್ಯಾಖಾತ್ರೆಯಲ್ಲಿ ಕದೀಮ ನೌಕರ
ರು. ಪುಣೆಯಲ್ಲಿ ಪೂರ್ವದ ಕಾಲೇಜನ್ನೂ, ಸಂಸ್ಕೃತ
ಶಾಸ್ತ್ರಗಳ ಶಾಲೆಗಳೂ ಸ್ಥಾಪಿಸಲ್ಪಟ್ಟ ಬಳಿಕ, ಇವರೇ
ಮೊದಲಿಗ ಅವೆಲ್ಲವುಗಳ ಮುಖ್ಯಾಧಿಕಾರಿಗಳಾಗಿ ನೇಮಿ
ಸಲ್ಪಟ್ಟರು. ಆ ಕೆಲಸವನ್ನು ಇವರು ಬಹುಕಾಲ ಮಾಡಿ
ಬಹಳ ಕೀರ್ತಿಯನ್ನು ಸಂಪಾದಿಸಿದರು. ಕೃಷ್ಣಶಾಸ್ತ್ರೀ
ಚಿಪಳೂಣಕರ ಮೊದಲಾದವರೆಷ್ಟೋ ಜನ ಹೆಸರಾದ ವಿ
ದ್ವಾಂಸರಿಗೆ ಕ್ಯಾಂಡೀಸಾಹೇಬರೇ ಇಂಗ್ಲಿಷ ಭಾಷೆಯನ್ನು
ಕಲಿಸಿದರು. ಮಹಾರಾಷ್ಟ್ರ ಭಾಷೆಯ ಜ್ಞಾನವು ಈ ಸಾ
ಹೇಬರಿಗಿದ್ದಷ್ಟು ಮಹಾರಾಷ್ಟ್ರದ ನಿವಾಸಿಗಳಲ್ಲಿ ಬಹು
ಸ್ವಲ್ಪ ಜನರಿಗೆ ಮಾತ್ರ ಇತ್ತೆಂದು ಹೇಳಬಹುದು.

ವಿದ್ಯಾಖಾತ್ರೆಯಲ್ಲಿ ನೌಕರರಾಗತಕ್ಕ ಯುರೋಪಿಯ
ನ್ ಜನರು ದೇಶಭಾಷೆಯಲ್ಲಿ ಪರೀಕ್ಷೆಯನ್ನು ಕೊಡುವ
ಬಗ್ಗೆ ಈ ಪೂರ್ವದಲ್ಲಿ ನಡೆಯುತ್ತಿದ್ದ ನಿಯಮಗಳನ್ನು

ಮುರಿದು, ಅವರು ಲಷ್ಕರೀ ಜನರಿಗೆ ನೇಮಿಸಿದ ಪರೀಹ್ಷೆಯನ್ನೇ ಇನ್ನು ಮುಂದೆ ಕೊಡತಕ್ಕದ್ದೆಂದು ಸರಕಾರದವರು ಠರಾಯಿಸಿದ್ದಾರೆ. ಇದರಿಂದ ಲಷ್ಕರದ ಜನರಿಗೆ ವಿದ್ಯಾಖಾತೆಯಲ್ಲಿ ಶೇರಲಿಕ್ಕೆ ಮಾರ್ಗವು ಸುಲಭವಾಯಿತು.

ಮುಂಬಯಿಯ ಎಲ್ಫಿನಸ್ತನ್ ಕಾಲೇಜದ ವಿದ್ಯಾರ್ಥಿಗಳಾದ ಭೀಮಾಚಾರ್ಯ ಝಳಕಿ ಎಂಬವರು "ನ್ಯಾಯ ಕೋಶ" ವೆಂಬದೊಂದು ಹೊಸ ಸಂಸ್ಕೃತ ಗ್ರಂಥವನ್ನು ರಚಿಸಿದ್ದಾರೆ. ಆ ಪುಸ್ತಕವನ್ನು ಕುರಿತು ಬರ್ಲಿನ ಪಟ್ಟಣ ಯುನಿವರ್ಸಿಟಿಯಲ್ಲಿ ಪ್ರೊಫೇಸರರಾಗಿದ್ದ ವೆಬರ್ ಎಂಬ ಘನ ವಿದ್ವಾಂಸರು ಬಹು ಸರಸ್ವಾದ ಅಭಿಪ್ರಾಯವನ್ನು ಬರೆದಿದ್ದಾರೆ. ಅವರು ಬರೆದದ್ದೇನೆಂದರೆ—"ಈ ಪುಸ್ತಕವು ಅತ್ಯುತ್ತಮವಾದ ಯೋಗ್ಯತೆಯುಳ್ಳದ್ದು, ಮೇಲಾದ ಸಾಹಸಕ್ಕೆ ಮಾತ್ರ ಸಾಧ್ಯವಾಗತಕ್ಕಂಥಾದು; ಇದರಿಂದ ನ್ಯಾಯಶಾಸ್ತ್ರದಲ್ಲಿ ಗ್ರಂಥಕರ್ತರ ಸ್ವಾರ್ಜ್ಞಾನವು ಸರಳ್ವಾಗಿ ವ್ಯಕ್ತವಾಗುತ್ತದೆ," ಇತ್ಯಾದಿ.

ಬ್ರಿಟಿಶ ಇಂಡಿಯದೊಳಗಿನ ವಿದ್ಯಾಖಾತೆಗಳಲ್ಲಿದ್ದ ಅಧಿಕಾರಿಗಳ ಪಟ್ಟಿಯು ಒಳಗಡೆಯಲ್ಲಿ ಪ್ರಸಿದ್ಧವಾಗಿದೆ. ಅದರಿಂದ ತಿಳಿಯುವದೇನೆಂದರೆ—

ಇಲಾಖೆಗಳ ಡಾಯರೆಕ್ಟರರು ೫ ಜನರುಂಟು. ಅವರ ವಿವರವು—

೧ ಬಂಗಾಲದ ಡಾಯರೆಕ್ಟರರ ಸಂಬಳ ಮೊದಲು ೨೦೦೦; ಮುಂದೆ ೧೦ ವರ್ಷಗಳಲ್ಲಿ ೨೫೦೦ ರೂ. ವ

ರೆಗೆ ಏರುವದು.

೨ ಮುಂಬಯಿಯ ಡಾಯರೆಕ್ಟರರ ಸಂಬಳ ಮೇಲಿನಂತೆ.

೩ ಮದ್ರಾಸದ ಡಾಯರೆಕ್ಟರರ ಸಂಬಳ ಮೊದಲು ೨೦೦೦; ಮುಂದೆ ೨೫೦ ರೂ. ವರೆಗೆ ಏರುವದು.

೪ ವಾಯವ್ಯ ಇಲಾಖೆಯ ಡಾಯರೆಕ್ಟರರ ಸಂಬಳ ಮೊದಲು ೧೫೦೦; ಮುಂದೆ ೨೦೦೦ ರೂ. ವರೆಗೆ ಏರುವದು.

೫ ಪಂಜಾಬದ ಡಾಯರೆಕ್ಟರರ ಸಂಬಳ ಮೇಲಿನಂತೆ.

ಇವರಲ್ಲದೆ ಉಳಿದ ಮೇಲ್ತರದ ಅಧಿಕಾರಿಗಳಲ್ಲಿ ೪ ವರ್ಗಗಳು ಮಾಡಲ್ಪಟ್ಟಿವೆ. ಅವುಗಳ ವಿವರವು—

೧ನೇ ವರ್ಗದಲ್ಲಿ ೯ ಜನರುಂಟು. ಇವರ ಸಂಬಳವು ಮೊದಲು ೧೨೫೦; ಮುಂದೆ ೫ ವರ್ಷಗಳಲ್ಲಿ ೧೫೦೦ ರೂ. ವರೆಗೆ ಏರುವದು.

೨ನೇ ವರ್ಗದಲ್ಲಿ ೧೯ ಜನರುಂಟು. ಇವರ ಸಂಬಳವು ಮೊದಲು ೧೦೦೦; ಮುಂದೆ ೫ ವರ್ಷಗಳಲ್ಲಿ ೧೨೫೦ ರೂ. ವರೆಗೆ ಏರುವದು.

೩ನೇ ವರ್ಗದಲ್ಲಿ ೫೫ ಜನರುಂಟು. ಇವರ ಸಂಬಳವು ಮೊದಲು ೭೫೦; ಮುಂದೆ ೫ ವರ್ಷಗಳಲ್ಲಿ ೧೦೦೦ ರೂ. ವರೆಗೆ ಏರುವದು.

೪ನೇ ವರ್ಗದಲ್ಲಿ ೪೦ ಜನರುಂಟು. ಇವರ ಸಂಬಳವು ಮೊದಲು ೫೦೦; ಮುಂದೆ ೫ ವರ್ಷಗಳಲ್ಲಿ ೭೫೦ ರೂ. ವರೆಗೆ ಏರುವದು.

ಆದರೆ ವಹಿವಾಟಿನ ವ್ಯಾಪ್ತಿಯ ಡಾಯರೆಕ್ಟರರಾದ ಮಿ.

ನಾರಾಯಣಭಾಯಿ ದಾಂಡೇಕರ ಎಂಬ ನೇಟೀವ ಗೃಹಸ್ಥರು ಇನ್ನೇ ವರ್ಗದಲ್ಲಿ ಎಣಿಸಲ್ಪಡುತ್ತಿದ್ದಾರ್ಯೋ ಅವರಿಗೆ ೧೦೦೦ ರೂ. ಮಾತ್ರ ಕಾಯುವುದು ಸಂಬಳ ಉಂಟು.

METHOD OF LEARNING FOREIGN LANGUAGES (Continued)

ಪರ ಭಾಷೆಗಳನ್ನು ಕಲಿಯುವ ಪದ್ಧತಿಯು.

———000———

(ಮುಂದಕ್ಕೆ ಸಾಗಿದ್ದು.)

ವ್ಯಾಕರಣಗಳು ಮೊದಲು ಬರೆಯಲ್ಪಟ್ಟ ಬಳಿಕ ಆ ವುಗಳಲ್ಲಿ ತಮಗಿರುವ ಪ್ರೀತಿಯು ಮೂಲಕವಾಗಿ ಶಿಕ್ಷಕರು ಅವುಗಳನ್ನು ತಮ್ಮ ವಿದ್ಯಾರ್ಥಿಗಳಿಗೆ ಕಲಿಸ ತೊಡಗಿದರು. ಅದರೆ ವ್ಯಾಕರಣಗಳು ಹುಟ್ಟುವ ಪೂರ್ವದಲ್ಲಿ ಬಹು ಕಾಲದಿಂದ ಭಾಷೆಗಳು ನಡೆಯುತ್ತ ಬಂದವು. ಸಿಸರೊ ವರ್ಜಿಲ್, ಶೆಕ್ಸಪೀಯರ, ಮೊದಲಾದ ಪರದೇಶಗಳ ಗ್ರಂಥ ಕರ್ತರೂ, ವಾಲ್ಮೀಕಿ, ವೇದವ್ಯಾಸ, ಮುಂತಾದ ಈ ದೇಶದ ಗ್ರಂಥಕರ್ತರೂ ತಮ್ಮ ತಮ್ಮ ಹೆಸರಾದ ಗ್ರಂಥಗಳನ್ನು ಬರೆದಾಗ ಅವರವರ ಭಾಷೆಗಳಿಗೆ ವ್ಯಾಕರಣಗಳಿದ್ದಿಲ್ಲ. ಕೇವಲ ವ್ಯಾಕರಣವನ್ನೇ ಕಲಿಯುವದರಿಂದ ಯಾವ ಭಾಷೆಯೂ ಅಪಗತವಾಗದು. ಭಾಷೆಯನ್ನು ಪೂರ್ಣವಾಗಿ ಕಲಿತುಕೊಂಡ ಬಳಿಕ ಅದರ ವ್ಯಾಕರಣವನ್ನು ಕಲಿಯುವದು ವಿಹೀತವೆಂದು ಒಬ್ಬ ವಿದ್ವಾಂಸನು ಹೇಳುತ್ತಾನೆ.

ಭಾಷೆಯು ಗಡಚಾದದೊಂದು ಆಯುಧದಂತೆ ಇರು

ತ್ತದೆ. ಅದನ್ನು ಪರರು ಪ್ರಯೋಗಿಸುವ ರೀತಿಯನ್ನು ನಾ
ವು ಲಕ್ಷ್ಯಪೂರ್ವಕವಾಗಿ ನೋಡಿ ತಿಳಿದುಕೊಂಡ ಹೊರ್ತು ನಾ
ವು ಸ್ವತಃ ಕೆಲಸಕ್ಕೆ ಬರುವಂತೆ ಅದನ್ನು ಪ್ರಯೋಗಿಸ
ಲಾರೆವು. ಇದರಿಂದ ಪರಭಾಷೆಯನ್ನು ಕಲಿಯುವ ಸ್ವಾಭಾ
ವಿಕ ಪದ್ಧತಿಯು ವ್ಯಕ್ತವಾಗುವುದೇನೆಂದರೆ, ನಾವು ಕಲಿ
ಯುತ್ತಿರುವ ಭಾಷೆಯಲ್ಲಿ ಮಾತನಾಡಲಿಕ್ಕೆ ಯತ್ನಿಸುವ ಪೂ
ರ್ವದಲ್ಲಿ ಆ ಭಾಷೆಯನ್ನು ಚೆನ್ನಾಗಿ ತಿಳಿದುಕೊಂಡು ಅದ
ರಲ್ಲಿಯೇ ನಮ್ಮ ಮನಸ್ಸಿನ ವಿಚಾರಗಳನ್ನು ನಡಿಸಲಿಕ್ಕೆ
ಕಲಿಯಬೇಕು. ಇದೇ ಪರಭಾಷೆಯನ್ನು ಕಲಿಯುವ ಗುಟ್ಟು. ಭಾಷೆಯನ್ನು ತಿಳಿದುಕೊಳ್ಳೋಣವೆಂದರೆ, ಅದನ್ನು
ಕೇಳಿಯೂ ಓದಿಯೂ ಅದರ ಅಭಿಪ್ರಾಯವನ್ನು ಗ್ರಹಿಸೋಣ
ವು; ಮತ್ತು ಭಾಷೆಯನ್ನು ಪ್ರಯೋಗಿಸೋಣವೆಂದರೆ,
ಅದರಲ್ಲಿ ಸ್ವತಃ ಮಾತನಾಡುವದೂ ಬರೆಯುವದೂ ಎಂದು
ತಿಳಿಯಬಹುದು. ಆ ಕಾರಣ ಈ ನಾಲ್ಕು ವಿಧಗಳಲ್ಲಿ ಪಾ
ರಂಗತನಾವವನೇ ಭಾಷೆಯಲ್ಲಿ ಪಾರಂಗತನೆನಿಸಿ ಕೊಳ್ಳುವ
ನು. ತಾಯಿ ಮೊದಲು ಕಿವಿಗಳನ್ನು, ತರುವಾಯ ಕಣ್ಣುಗ
ಳನ್ನು, ಒಳಕ ನಾಲಿಗೆಯನ್ನು, ಕಡೆಯಲ್ಲಿ ಕೈಗಳನ್ನು ಭಾ
ಷೆಯ ಅಭ್ಯಾಸದಲ್ಲಿ ತೊಡಗಿಸುವದೇ ಸ್ವಾಭಾವಿಕ ಕ್ರಮ
ವಾಗಿರುತ್ತದೆ. ಈ ಕ್ರಮವಾಗಿ ಕಲಿತಂಥ ಭಾಷೆಯು ಪೂ
ರ್ಣವಾಗಿ ಅವಗತವಾಗದೆ ಇರದು. ಈ ಪದ್ಧತಿಯು ಸ್ವಾ
ಭಾವಿಕ ಕ್ರಮವುಳ್ಳದ್ದೆಂಬದರ ಕಾರಣವೇನೆಂದರೆ, ಇದರ
ಲ್ಲಿ ಸುಲಭವಾದ ಅಭ್ಯಾಸವು ಮೊದಲಿಗೆ ಆರಂಭವಾಗಿ, ಸ
ಟ್ಟ ಕಡೆಯಲ್ಲಿ ಎಲ್ಲಕ್ಕೂ ಕಠಿಣವಾದ ಅಭ್ಯಾಸವು ಬರುತ್ತ
ದೆ. ಕೇಳುವಾಗಲೂ ಓದುವಾಗಲೂ ನಮಗೆ ಭಾಷೆಯ ಜ್ಞ

